ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮಾರ್ಚ್ 12, 2022

ಸಂಪುಟ : 48 ಸಂಚಿಕೆ : 301 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com



## ನಗರ ದೇವತೆ ಜಾತ್ರೆಗೆ ಸಿದ್ಧತೆ

ಇದೇ ಮಾ.13ರಿಂದ ಆರಂಭವಾಗುವ ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಹಿನ್ನೆಲೆಯಲ್ಲಿ ದೇವಸ್ಥಾನದ ಮುಂಭಾಗ ಆಕರ್ಷಕ ಪೆಂಡಾಲ್ ನಿರ್ಮಾಣವಾಗುತ್ತಿದೆ. ನಗರದಲ್ಲಿನ ದೇವಾಲಯಗಳಿಗೂ ಸುಣ್ಣ-ಬಣ್ಣ ಬಳಿದು ಸಿಂಗರಿಸಲಾಗುತ್ತಿದೆ. ಇತ್ತ ಜನರೂ ಸಹ ಹಬ್ಬದ ಸಿದ್ಧತೆಗೆ ಭರ್ಜರಿ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಜಾತ್ರೆಗೆ ಮುನ್ನವೇ ದೇವಿ ದರ್ಶನಕ್ಕೆ ಭಕ್ತರು ಆಗಮಿಸುತ್ತಿದ್ದು ಸರದಿಯಲ್ಲಿ ನಿಂತು ದರ್ಶನ ಪಡೆಯಲಾರಂಭಿಸಿದ್ದಾರೆ.

# ಕೈ ಹಿಡಿಯಲು ಹಿಂಜರಿಕೆ

## ಪಂಚ ರಾಜ್ಯಗಳ ಚುನಾವಣೆ ಶಾಕ್ : ಬಿಜೆಪಿ ತೊರೆಯುವ ವಿಚಾರದಲ್ಲಿದ್ದ ನಾಯಕರು ಮರುಪರಿಶೀಲನೆಯಲ್ಲಿ

ಬೆಂಗಳೂರು, ಮಾ. 11 – ಉತ್ತರದ ಐದು ರಾಜ್ಯಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ದೊರೆತ ಭರ್ಜರಿ ಗೆಲುವು ರಾಜ್ಯ ರಾಜಕಾರಣದ ಮೇಲೆ ಪರಿಣಾಮ ಬೀರುತ್ತಿದೆ. ಬಿಜೆಪಿ ತೊರೆಯುವ ವಿಚಾರದಲ್ಲಿದ್ದ ಹಲವು ನಾಯಕರು ತಮ್ಮ ನಿರ್ಧಾರ ಮರು ಪರಿಶೀಲಿಸುತ್ತಿದ್ದಾರೆ.

ಉಮೇಶ್ ಕತ್ತಿ, ಕೆ.ಗೋಪಾಲಯ್ಯ, ನಾರಾಯಣ ಗೌಡ, ಜೆ.ಸಿ. ಮಾಧುಸ್ವಾಮಿ ಸೇರಿದಂತೆ ಏಳು ಮಂದಿ ಸಚಿವರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿದ್ದವು.

ಸದಾ ಅಧಿಕಾರಕ್ಕೆ ಅಂಟಿಕೊಂಡಿರಲು ತವಕಿಸುವ ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಮುಖಂಡರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂಬ ಆಶಾಭಾವನೆಯೊಂದಿಗೆ ತಾವಿರುವ ಪಕ್ಷಗಳನ್ನು ತೊರೆದು, ಹಸ್ತ ಹಿಡಿಯಲು ಮುಂದಾಗಿದ್ದರು.

ಬಹುತೇಕ ಈ ಎಲ್ಲ ಮುಖಂಡರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ

**ತಮ್ಮ ಪಕ್ಷಕ್ಕೆ ನೆಲೆಯಿಲ್ಲದ ಕ್ಷೇತ್ರಗಳಲ್ಲಿ ಬಿಜೆಪಿ, ಜೆಡಿಎಸ್‌ನಲ್ಲಿನ ವರ್ಚಸ್ಸುಳ್ಳ ನಾಯಕರನ್ನು ಸೆಳೆಯಲು ನಿರಂತರ ಪ್ರಯತ್ನ ಮಾಡಿದ್ದ ಕಾಂಗ್ರೆಸ್ ಮುಖಂಡರು.**

ಅವರೊಂದಿಗೆ ಒಂದೆರಡು ಸುತ್ತಿನ ಮಾತುಕತೆಯನ್ನೂ ನಡೆಸಿದ್ದರು.

ತಮ್ಮ ಪಕ್ಷಕ್ಕೆ ನೆಲೆಯಿಲ್ಲದ ಕ್ಷೇತ್ರಗಳಲ್ಲಿ ಬಿಜೆಪಿ, ಜೆಡಿಎಸ್‌ನಲ್ಲಿನ ವರ್ಚಸ್ಸುಳ್ಳ ಮುಖಂಡರು ಮತ್ತು ಶಾಸಕರನ್ನು ಸೆಳೆಯಲು ಕಾಂಗ್ರೆಸ್ ನಾಯಕರು ಸಹಾ ಕಳೆದ ಒಂದು ವರ್ಷದಿಂದ ನಿರಂತರ ಪ್ರಯತ್ನ ಮಾಡಿ, ಬಹುತೇಕ ಯಶಸ್ಸನ್ನೂ ಕಂಡಿದ್ದರು.

ಇದು ಸಾಲದೆಂಬಂತೆ ಮತ್ತಷ್ಟು ಮಂದಿ ಪ್ರಭಾವಿ ಹಾಗೂ ವರ್ಚಸ್ಸಿನ ನಾಯಕರನ್ನು ಸೆಳೆದು 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಬಹುಮತ ತಂದುಕೊಳ್ಳುವ ಕಸರತ್ತು ನಡೆಸಿದ್ದರು.

ಒಂದೆಡೆ ಪಕ್ಷವನ್ನು ಸಂಘಟಿಸುವುದು ಮತ್ತೊಂದೆಡೆ ಮುಖಂಡರನ್ನು ಸೆಳೆಯುವ ನಿರಂತರ ಪ್ರಯತ್ನ ನಡೆದಿತ್ತು.

ಜೆಡಿಎಸ್ ಮತ್ತು ಬಿಜೆಪಿ ಶಾಸಕರನ್ನು ಮತ್ತು ಮುಖಂಡರನ್ನು ಸೆಳೆಯುವ ವಿಷಯದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ಪೈಪೋಟಿಯೇ ಉಂಟಾಗಿತ್ತು.

ತಾವು ಕರೆತರುವ ವ್ಯಕ್ತಿಗಳು ವಿಧಾನಸಭೆಗೆ ಆಯ್ಕೆಗೊಂಡರೆ ಮುಖ್ಯಮಂತ್ರಿ ಹುದ್ದೆಯ ರೇಸಿನಲ್ಲಿ ತಮ್ಮೊಂದಿಗೆ ಇರುತ್ತಾರೆ ಎಂಬ ದೂರದೃಷ್ಟಿಯಿಂದ ಅನ್ಯ ಪಕ್ಷದವರನ್ನು ಸೆಳೆಯುವ ಹಠಕ್ಕೆ ಬಿದ್ದಿದ್ದರು.

ಅದರಲ್ಲೂ ಜೆಡಿಎಸ್‌ನ ಜಿ.ಟಿ.ದೇವೇಗೌಡ, ಶ್ರೀನಿವಾಸ್, ಎ.ಟಿ.ರಾಮಸ್ವಾಮಿ, ಶಿವಲಿಂಗೇಗೌಡ ಸೇರಿದಂತೆ 11 ಶಾಸಕರು ಹಾಗೂ ಮುಖಂಡರುಗಳು ಕಾಂಗ್ರೆಸ್ ಸೇರುವ ಮಾತುಕತೆಗಳೂ ನಡೆದಿದ್ದವು. ಅದರಲ್ಲಿ ಕೆಲವರು ಜೆಡಿಎಸ್ ತೊರೆಯುವುದಾಗಿಯೂ ಹೇಳಿಕೆ ನೀಡಿದ್ದರು, ಆದರೆ, ಬಿಜೆಪಿಯಿಂದ (2ನೇ ಪುಟಕ್ಕೆ)

## ಉಚ್ಚಂಗೆಮ್ಮ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಕ್ರಮ

ಹರಪನಹಳ್ಳಿ, ಮಾ.11- ರಾಜ್ಯದ ಮುಜರಾಯಿ ಇಲಾಖೆಯಡಿ 'ಎ' ಗ್ರೇಡ್ ನಲ್ಲಿರುವ 205 ದೇವಸ್ಥಾನಗಳ ಪೈಕಿ ಪ್ರಧಾನಿ ಮೋದೀಜಿ ಅವರ ಕನಸಿನಂತೆ ಮೊದಲ ಹಂತದಲ್ಲಿ ಉಚ್ಚಂಗೆಮ್ಮ ದೇವಸ್ಥಾನ ಸೇರಿದಂತೆ, 25 ದೇವಸ್ಥಾನಗಳನ್ನು 1140 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಮುಜರಾಯಿ ಇಲಾಖೆಯ ರಾಜ್ಯ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.



ತಾಲ್ಲೂಕಿನ ಉಚ್ಚಂಗಿದುರ್ಗ ಗ್ರಾಮದಲ್ಲಿ ಉತ್ಸವಾಂಭ ದೇವಿಯ ಹಿರೇಹಬ್ಬದ ಜಾತ್ರಾ ಮಹೋತ್ಸವದ ಅಂಗವಾಗಿ ಗಂಧರ್ವ ಇವೆಂಟ್ಸ್ ರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭಾರತವು ಸಂಸ್ಕೃತಿ, ಸಂಸ್ಕಾರ, ಅಧ್ಯಾತ್ಮ, ಪೌರಾಣಿಕ ಇತಿಹಾಸ ಹೊಂದಿರುವ ಪುಣ್ಯಭೂಮಿ. ಗ್ರಾಮೀಣ ಭಾಗಗಳ ಜನರು ಈಗಲೂ ವಿಶಿಷ್ಟ ಪರಂಪರೆಯನ್ನು ಹೊಂದಿದ್ದು, (2ನೇ ಪುಟಕ್ಕೆ)

## ಪಾಕ್ ಒಳಗೆ ಬಿದ್ದ ಕ್ಷಿಪಣಿ

ಇಸ್ಲಾಮಾಬಾದ್/ನವದೆಹಲಿ, ಮಾ. 11 – ತಾಂತ್ರಿಕ ತೊಡಕಿನಿಂದಾಗಿ ಎರಡು ದಿನಗಳ ಹಿಂದೆ ಆಕಸ್ಮಿಕವಾಗಿ ಕ್ಷಿಪಣಿಯೊಂದು ಸಿಡಿದು ಪಾಕಿಸ್ತಾನದ ಒಳಗೆ ಬಿದ್ದಿತ್ತು ಎಂದು ಹೇಳಿರುವ ಭಾರತ, ಈ ಘಟನೆಗಾಗಿ ತೀವ್ರ ವಿಷಾದ

**ಆಕಸ್ಮಿಕ ಘಟನೆಗಾಗಿ ತೀವ್ರ ವಿಷಾದ ವ್ಯಕ್ತಪಡಿಸಿದ ಭಾರತ; ಉನ್ನತ ಹಂತದ ತನಿಖೆಗೆ ಆದೇಶ**

ವ್ಯಕ್ತಪಡಿಸಿದೆ.

ಭಾರತದಿಂದ ಬಂದ ಅತಿ ವೇಗದ ಕ್ಷಿಪಣಿಯೊಂದು ಪಾಕಿಸ್ತಾನದ ಖನೆವಲ್ ಜಿಲ್ಲೆಯ ಮಿಯಾ ಚನ್ನು ಬಳಿ ಬಿದ್ದಿತ್ತು. ಈ ಘಟನೆ ವಿಮಾನಗಳಿಗೆ ಅಪಾಯ ತಂದಿತ್ತು ಎಂದು ಪಾಕಿಸ್ತಾನ ನಿನ್ನೆ ಭಾರತದ ರಾಯಭಾರಿಯನ್ನು ಕರೆಸಿಕೊಂಡು ಪ್ರತಿಭಟನೆ ದಾಖಲಿಸಿತ್ತು.

ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವುದಾಗಿ ಹೇಳಿರುವ ರಕ್ಷಣಾ ಸಚಿವಾಲಯ, ಘಟನೆಯ ಉನ್ನತ ಹಂತದ ತನಿಖೆಗೆ ಆದೇಶಿಸಿದೆ.

ಕ್ಷಿಪಣಿ ಪಾಕಿಸ್ತಾನದ ಒಳಗೆ ಬಿದ್ದಿರುವುದಾಗಿ ತಿಳಿದು ಬಂದಿದೆ. ಘಟನೆಗೆ ತೀವ್ರ ವಿಷಾದವಿದೆ, ಅವಘಡದಿಂದ ಯಾರಿಗೂ ಜೀವ ಹಾನಿ ಆಗದೇ ಇರುವುದು ಸಮಾಧಾನದ ವಿಷಯ ಎಂದು ಸಚಿವಾಲಯ ತಿಳಿಸಿದೆ. ಈ ಘಟನೆಯನ್ನು ಎಲ್ಲಾ ದೃಷ್ಟಿಕೋನದಿಂದ ತನಿಖೆಗೆ ಒಳಪಡಿಸಲಾಗುವುದು ಎಂದು ಬೆಳವಣಿಗೆಯ ವಿವರ ತಿಳಿದಿರುವವರು ಹೇಳಿದ್ದಾರೆ.

ಮಾನವ ರಹಿತ ವಸ್ತುವೊಂದು ಭಾರತದಿಂದ ಬಂದು ಪಾಕಿಸ್ತಾನದ ಒಳಗೆ 124 ಕಿ.ಮೀ. ಕ್ರಮಿಸಿ ಮಿಯಾ ಚನ್ನು ಬಳಿ ಬಿದ್ದಿದೆ ಎಂದು ಪಾಕಿಸ್ತಾನದ ಐ.ಎಸ್.ಪಿ.ಆರ್. ಪ್ರಧಾನ ನಿರ್ದೇಶಕ ಮೇಜರ್ ಜನರಲ್ ಬಾಬರ್ ಇಫ್ತಿಕಾರ್ ಹೇಳಿದ್ದರು. ಸಂಜೆ 6.43ರ ಸಮಯದಲ್ಲಿ ಸೂಪರ್ (2ನೇ ಪುಟಕ್ಕೆ)



## ಟಗರಿನ ಕಾಳಗ

ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಹಿನ್ನೆಲೆಯಲ್ಲಿ ನಗರದ ದೇವರಾಜ ಅರಸು ಬಡಾವಣೆ ಮೈದಾನದಲ್ಲಿ ಶುಕ್ರವಾರ 6 ಮತ್ತು 8 ಹಲ್ಲಿನ ಟಗರಿನ ಕಾಳಗ ಏರ್ಪಡಿಸಲಾಗಿತ್ತು. ಮೈ ನವಿರೇಳಿಸುತ್ತಿದ್ದ ಕಾಳಗವನ್ನು ನೋಡಲು ನೂರಾರು ಜನರು ನೆರೆದಿದ್ದರು. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಕಾಳಗ ಸ್ಥಳಕ್ಕೆ ಭೇಟಿ ನೀಡಿದ್ದರು.

## ರಾಜ್ಯದ ಮೂರು ಕಾಯ್ದೆಗಳ ವಾಪಸ್, ಬೆಳೆಗಳಿಗೆ ಬೆಲೆ



**ಜನಜಾಗೃತಿ ಜಾಥಾದಲ್ಲಿ ಎಸ್.ಆರ್. ಹಿರೇಮಠ ಆಗ್ರಹ**

ದಾವಣಗೆರೆ, ಮಾ. 11 – ಉಳುವವನೇ ಒಡೆಯ ಎಂಬುದನ್ನು ಬದಲಿಸಿ, ಉಳ್ಳವನೇ ಒಡೆಯ ಎಂದು ಮಾಡಲು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಸೇರಿದಂತೆ, ಮೂರು ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಹಾಗೂ ಎಲ್ಲ ಬೆಳೆಗಳಿಗೆ ಕಾನೂನು ಬದ್ಧ ಕನಿಷ್ಠ ಬೆಂಬಲ ಬೆಲೆ ನೀಡಬೇಕು. ಇಲ್ಲವಾದರೆ, 2023ರಲ್ಲಿ ಜನರಿಂದ 'ಬ್ರಹ್ಮಾಸ್ತ್ರ' ಎದುರಾಗಲಿದೆ ಎಂದು ಸಮಾಜ ಪರಿವರ್ತನ ಸಮುದಾಯದ ಎಸ್.ಆರ್. ಹಿರೇಮಠ್ ಎಚ್ಚರಿಸಿದ್ದಾರೆ.

ಜನಾಂದೋಲನ ಮಹಾಮೈತ್ರಿಯ ಜನಜಾಗೃತಿ ಜಾಥಾದ ಅಂಗವಾಗಿ ಬಸವ ಕಲ್ಯಾಣದಿಂದ ಬೆಂಗಳೂರಿಗೆ ಕೈಗೊಳ್ಳಲಾಗುತ್ತಿರುವ ಜಾಥಾ ಇಂದು ಬೆಳಿಗ್ಗೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಜಯದೇವ ವೃತ್ತದಲ್ಲಿ ಆಯೋಜಿಸಲಾಗಿದ್ದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ಕಾಯಿದೆ 2020, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ನಿಯಂತ್ರಣ ಅಭಿವೃದ್ಧಿ) ಕಾಯ್ದೆ ಹಾಗೂ ಕರ್ನಾಟಕ ಜಾನುವಾರು ಹತ್ಯಾ (ನಿಷೇಧ ಮತ್ತು ಸಂರಕ್ಷಣೆ) ಕಾಯ್ದೆ 2020 ವಾಪಸ್ ಪಡೆಯಬೇಕು. ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ನೀಡಬೇಕು. ಇದಕ್ಕಾಗಿ ಪ್ರತಿ ಗ್ರಾಮ ಸಭೆಗಳಲ್ಲಿ ಠರಾವು ಜಾರಿಗೊಳಿಸಿ ಅದನ್ನು ಮುಖ್ಯಮಂತ್ರಿಗೆ ಕಳಿಸಬೇಕು. ಈ ಬಗ್ಗೆ ಶಾಸಕರ ಮೇಲೂ ಒತ್ತಡ ಹೇರಬೇಕು ಎಂದು ಹಿರೇಮಠ್ (2ನೇ ಪುಟಕ್ಕೆ)

## ಕ್ಷೇತ್ರಕ್ಕೆ ಹೆಚ್ಚು ಅನುದಾನ ತಂದ ಶಾಸಕರು



**ಎಸ್.ವಿ.ರಾಮಚಂದ್ರ ಬಗ್ಗೆ ಸಂಸದ ಸಿದ್ದೇಶ್ವರ ಪ್ರಶಂಸೆ**

ಜಗಳೂರು, ಮಾ.11- ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿರುವ ಎಸ್.ವಿ. ರಾಮಚಂದ್ರ ಕ್ಷೇತ್ರದಲ್ಲಿ ತಮ್ಮ ಆಡಳಿತಾವಧಿಯಲ್ಲಿ ಹಿಂದಿನ ಯಾವ ಶಾಸಕರೂ ತರದಂತಹ ಸುಮಾರು 2,500 ಕೋಟಿ ರೂ. ಅನುದಾನವನ್ನು ಪ್ರಥಮ ಬಾರಿಗೆ ತಾಲ್ಲೂಕಿಗೆ ತರುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದು ಜಿ.ಎಂ.ಸಿದ್ದೇಶ್ವರ್ ಪ್ರಶಂಸಿಸಿದರು.

ತಾಲ್ಲೂಕಿನ ವಿವಿಧ (5ನೇ ಪುಟಕ್ಕೆ)

## ಜಾತ್ರೆ : ಪ್ರಾಣಿ ಬಲಿ ನಿಷೇಧ

ದಾವಣಗೆರೆ, ಮಾ. 11- ನಾಡಿದ್ದು ದಿನಾಂಕ 13ರ ಭಾನುವಾರದಿಂದ ಇದೇ ದಿನಾಂಕ 16 ಬುಧವಾರದವರೆಗೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಹಾಗೂ ವಿನೋಬನಗರದ ಶ್ರೀ ಚೌಡೇಶ್ವರಿ ದೇವಿ ಜಾತ್ರೆ ನಡೆಯಲಿದ್ದು, ದೇವಸ್ಥಾನ ಅಥವಾ ಜಾತ್ರಾ ಆವರಣದ ಪ್ರದೇಶದೊಳಗೆ ದೇವರ ಹೆಸರಿನಲ್ಲಿ ಪ್ರಾಣಿಗಳ ಬಲಿ ನೀಡುವುದು ಕಾನೂನಿಗೆ ವಿರುದ್ಧವಾಗಿರುತ್ತದೆ ಎಂದು (2ನೇ ಪುಟಕ್ಕೆ)




ಶ್ಯಾಬನೂರಿನಲ್ಲಿ ಇಂದು ರಥೋತ್ಸವ
ರಾತ್ರಿ 12 ಗಂಟೆ ನಂತರ
ದಿನಾಂಕ 13ರ ಭಾನುವಾರ ಬೆಲ್ಲದ ಬಂಡಿ
ದಿನಾಂಕ 14ರ ಸೋಮವಾರ ಓಕುಳಿ
ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...
ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.


## ಪ್ರತಿಪಕ್ಷ ನಾಯಕ ಸ್ಥಾನ ಉಳಿಕೆಯ ಸವಾಲು

### ವಿಪಕ್ಷ ಸ್ಥಾನಕ್ಕೆ ಆಮ್ ಆದ್ಮಿ ಪಾರ್ಟಿ ಎದುರಿಸಬೇಕಾದ ಸ್ಥಿತಿ ಕಾಂಗ್ರೆಸ್‌ಗೆ

ನವದೆಹಲಿ, ಮಾ. 11 – ವಿಧಾನಸಭಾ ಚುನಾವಣೆಯಲ್ಲಿ ತೀವ್ರ ಮುಖಭಂಗಕ್ಕೆ ಗುರಿಯಾಗಿರುವ ಕಾಂಗ್ರೆಸ್, ಈಗ ವಿರೋಧ ಪಕ್ಷದ ನಾಯಕನಾಗಿ ಮುಂದುವರೆಯಲು ಆಮ್ ಆದ್ಮಿ ಪಾರ್ಟಿಯನ್ನು ಎದುರಿಸಬೇಕಾಗಿದೆ.

ಕಾಂಗ್ರೆಸ್ ಈಗ 'ಐ.ಸಿ.ಯು.'ನಲ್ಲಿರುವಂತಹ ಸ್ಥಿತಿ ಎದುರಿಸುತ್ತಿದೆ. ಪಕ್ಷಕ್ಕೀಗ ಅಸ್ತಿತ್ವದ ಸವಾಲು ಎದುರಾಗಿದೆ. 2024ರ ಲೋಕಸಭಾ ಚುನಾವಣೆಗೆ ಸಿದ್ಧವಾಗುವ ಹಾದಿ ಕಠಿಣವಾಗಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಆಮ್ ಆದ್ಮಿ ಪಾರ್ಟಿ ಪಂಜಾಬ್ ಚುನಾವಣೆಯಲ್ಲಿ 117 ಸ್ಥಾನಗಳ ಪೈಕಿ 92ರಲ್ಲಿ ದಾಖಲೆಯ ಗೆಲುವು ಸಾಧಿಸಿದೆ. ಉತ್ತರ ಪ್ರದೇಶ, ಮಣಿಪುರ, ಉತ್ತರಾಖಂಡ ಹಾಗೂ ಗೋವಾಗಳಲ್ಲಿ ಕಾಂಗ್ರೆಸ್ ತೀವ್ರ ಮುಖಭಂಗಕ್ಕೆ ಗುರಿಯಾಗಿದೆ.

ಕಾಂಗ್ರೆಸ್ ಹಾಗೂ ಎ.ಎ.ಪಿ. ಎರಡೂ ಈಗ ತಲಾ ಎರಡು ರಾಜ್ಯಗಳಲ್ಲಿ ಅಧಿಕಾರದಲ್ಲಿವೆ.

**2024ರ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಸಿದ್ಧವಾಗುವ ಹಾದಿ ಕಠಿಣವಾಗಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಿಸಿದ್ದಾರೆ.**

ಎ.ಎ.ಪಿ.ಯು ದೆಹಲಿ ಹಾಗೂ ಪಂಜಾಬ್‌ಗಳಲ್ಲಿ ಅಧಿಕಾರ ಹೊಂದಿದೆ. ಕಾಂಗ್ರೆಸ್ ಪಕ್ಷವು ರಾಜಸ್ಥಾನ ಹಾಗೂ ಛತ್ತೀಸ್‌ಘಡಗಳಲ್ಲಿ ಅಧಿಕಾರ ಹೊಂದಿದೆ. ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ಗಳಲ್ಲಿ ಮೈತ್ರಿ ಸರ್ಕಾರದಲ್ಲಿ ಭಾಗಿಯಾಗಿದೆ.

ಕಾಂಗ್ರೆಸ್‌ನಲ್ಲೀಗ ಬದಲಾವಣೆಯ ಕೂಗು ಕೇಳಿ ಬಂದಿದೆ. ತಕ್ಷಣವೇ ಸಂಘಟನೆಯಲ್ಲಿ ಸಮಗ್ರ ಬದಲಾವಣೆ ಮಾಡುವಂತೆ ಜಿ-23 ನಾಯಕರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಗೆ ಈ ಹಿಂದೆ ಒತ್ತಾಯಿಸಿದ್ದರು, ಈಗ ಮತ್ತೆ ಒತ್ತಾಯಿಸುವ ಸಿದ್ಧತೆಯಲ್ಲಿದ್ದಾರೆ.

ಆಮ್ ಆದ್ಮಿ ಪಾರ್ಟಿ ಹಾಗೂ ತೃಣಮೂಲ ಕಾಂಗ್ರೆಸ್ ಪಕ್ಷಗಳು ಈ ಹಿಂದೆಯೂ ಪ್ರತಿಪಕ್ಷಗಳ ನೇತೃತ್ವ ತಮ್ಮದಾಗಿರಲಿ ಎಂದು ಬಯಸಿದ್ದವು. ಪಂಜಾಬ್ ಸೋಲು ಕಾಂಗ್ರೆಸ್ ಸ್ಥಾನವನ್ನು ಮತ್ತಷ್ಟು ದುರ್ಬಲಗೊಳಿಸಿದೆ.

ವಿಧಾನಸಭಾ ಚುನಾವಣಾ ಫಲಿತಾಂಶದ ಬಗ್ಗೆ ಪ್ರತಿಕ್ರಿಯಿಸಿರುವ ಶಿವಸೇನೆ ಸಂಸದೆ ಪ್ರಿಯಾಂಕ ಚತುರ್ವೇದಿ, ಬಿಜೆಪಿ ಯಾವ ಪಕ್ಷ ಕಠಿಣ ಸ್ಪರ್ಧೆ ನೀಡಿದರೂ ಅದಕ್ಕೆ ಬೆಂಬಲಿಸಬೇಕಿದೆ ಎಂದಿದ್ದಾರೆ.

ಕಾಂಗ್ರೆಸ್ ಹೊಂದಿರುವ ಪ್ರತಿಪಕ್ಷದ ನಾಯಕತ್ವ ಸ್ಥಾನಕ್ಕೆ ಆಮ್ ಆದ್ಮಿ ಪಾರ್ಟಿ ದೊಡ್ಡ ಬೆದರಿಕೆ ಒಡ್ಡುತ್ತಿದೆ ಎಂದು ಅಧ್ಯಯನ ಸಂಸ್ಥೆಯಾದ ಲೋಕನೀತಿಯ ಸಹ ನಿರ್ದೇಶಕ ಸಂಜಯ್ ಕುಮಾರ್ ಹೇಳಿದ್ದಾರೆ. ಆಮ್ ಆದ್ಮಿ ಪಾರ್ಟಿ ಯಾವುದೇ ರಾಜ್ಯದಲ್ಲಿ (5ನೇ ಪುಟಕ್ಕೆ)


25ನೇ ವರ್ಷದ ಚಿರಸ್ಮರಣೆ



ಲಿಂ. ಶ್ರೀ ಮೂಲಿಮನಿ ನಿಂಗಪ್ಪನವರು
ವಿದ್ಯಾನಗರ, ಹರಿಹರ.
ನೀವು ನಿಮ್ಮನ್ನಗಲಿ ಇಂದಿಗೆ ಇಪ್ಪತ್ತೈದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.
ಧರ್ಮಪತ್ನಿ: ಶ್ರೀಮತಿ ಶಂಕುತಲಮ್ಮ ನಿಂಗಪ್ಪ ಮೂಲಿಮನಿ,
ಶ್ರೀಮತಿ ಜ್ಯೋತಿ ಶ್ರೀ ಪ್ರಭು ಮೂಲಿಮನಿ, ಶ್ರೀಮತಿ ಕವಿತಾ ಶ್ರೀ ರಘುಕುಮಾರ ಬಿ.ಇ.
ಶ್ರೀಮತಿ ವೀಣಾ ಶ್ರೀ ಹನುಮಂತಪ್ಪ ಎ.ಎಂ.ಸಿ.
ಮನೋಜ್, ಎಂ.ಪಿ. ಚೇತನ್, ಎಂ.ಪಿ. ತ್ರೀಷಾ ಎಂ.ಆರ್. ಭರತ್ ಎ.ಎಂ.ಸಿ.
ವಾಹಿನಿ ಆಟೋ ಸರ್ವೀಸ್, ಬಜಾಜ್ ಸ್ಪೇರ್ಸ್ ಮತ್ತು ಸರ್ವೀಸ್, ಪಿ.ಬಿ. ರಸ್ತೆ ಹರಿಹರ,

ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ|| ಎಂ. ಕನ್ನಪ್ಪನವರು
ಎಂ.ಕೆ. ಇಂಡಸ್ಟ್ರೀಸ್ ಮಾಲೀಕರು
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು...
ನೀವು ತೋರಿದ ಮಾರ್ಗ ದರ್ಶನದಲ್ಲಿ ಮುನ್ನಡೆಯುತ್ತಾ...
ಸದಾ ನಿಮ್ಮ ಸ್ಮರಣೆಯಲ್ಲಿರುವ...
ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಬಂಧುಗಳು ಹಾಗೂ ಮಿತ್ರರು.
ಎಂ.ಕೆ. ಇಂಡಸ್ಟ್ರೀಸ್, ಎಂ.ಕೆ. ಐಸ್ ಇಂಡಸ್ಟ್ರೀಸ್
ಎಂ.ಕೆ. ಆಯಿಲ್ ಟ್ರೇಡರ್ಸ್, ದಾವಣಗೆರೆ.

# ಸರ್ಕಾರಿ ನೌಕರರ ಹಿತ ಕಾಯಲು ಬದ್ಧ : ಷಡಾಕ್ಷರಿ



## ಹರಿಹರದಲ್ಲಿ ನೌಕರರ ನೂತನ ವಸತಿ ಗೃಹಗಳ ಉದ್ಘಾಟನೆ

ಹರಿಹರ, ಮಾ. 11- ರಾಜ್ಯ ಸರ್ಕಾರಿ ನೌಕರರು ಸ್ವಾಭಿಮಾನದಿಂದ ಜೀವನ ನಡೆಸುವು ದಕ್ಕೆ ಯಾವುದೇ ರೀತಿಯ ತೊಂದರೆ ಬರದಂತೆ ಸರ್ಕಾರಿ ನೌಕರರ ಹಿತ ಕಾಯುವ ಕೆಲಸವನ್ನು ರಾಜ್ಯ ಸರ್ಕಾರಿ ನೌಕರರ ಸಂಘ ಮಾಡುತ್ತದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

ನಗರದ ಗುರುಭವನದ ಸಭಾಂಗಣದಲ್ಲಿ ಸರ್ಕಾರಿ ನೌಕರರ ತಾಲ್ಲೂಕು ಸಂಘದ ವತಿಯಿಂದ ಮೊನ್ನೆ ನಡೆದ ನೌಕರರ ನೂತನ ವಸತಿ ಗೃಹಗಳ ಉದ್ಘಾಟನೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಶೈಕ್ಷಣಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ವೇತನ ಆಯೋಗದ ಮಾದರಿಯಲ್ಲಿ ರಾಜ್ಯ ನೌಕರರಿಗೆ ವೇತನ ಕೊಡಿಸುವ ನಿಟ್ಟಿನಲ್ಲಿ ಈಗಾಗಲೇ ಎಲ್ಲಾ ರೀತಿಯ ಹೋರಾಟ ನಡೆಸಿದ್ದು, ಈಗ ಚುನಾವಣೆ ವರ್ಷವಾಗಿರೋದರಿಂದ ಅದನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಮ್ಮ ಸಂಘವು ನೌಕರರ ಹಿತಕ್ಕಾಗಿ ಹೋರಾಟ ಮಾಡಿ ಹಬ್ಬಕ್ಕೆ 10 ಸಾವಿರ, ಬಡ್ಡಿ ರಹಿತ 25 ಸಾವಿರ ಮತ್ತು ಮಹಿಳೆಯರಿಗೆ ಹೆರಿಗೆ ಸಮಯದಲ್ಲಿ 6 ತಿಂಗಳು ಮನೆಯಲ್ಲಿ ಇದ್ದು ವೇತನ ಪಡೆಯುವ ವ್ಯವಸ್ಥೆ ಮತ್ತು ಕೊರೊನಾ ಸಮಯದಲ್ಲಿ 2 ವರ್ಷ ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ವೇತನವನ್ನು ಕೊಡಿಸುವ ಕಾರ್ಯವನ್ನು ಅಂದಿನ ಸಿ.ಎಂ. ಬಿ.ಎಸ್ ಯಡಿಯೂರಪ್ಪ ನವರ ಆಡಳಿತದಲ್ಲಿ ಮಾಡಿಸಲಾಯಿತು ಎಂದವರು ಹೇಳಿದ್ದಾರೆ.

ಶಾಸಕ ಎಸ್. ರಾಮಪ್ಪ ಮಾತನಾಡಿ, ಸರ್ಕಾರಿ ನೌಕರರು ಕೊರೊನಾ ಸಮಯದಲ್ಲಿ ಮನೆಯಲ್ಲಿ ಕುಳಿತುಕೊಳ್ಳದೆ ಉತ್ತಮ ಕರ್ತವ್ಯ ವನ್ನು ಮಾಡಿದ್ದಾರೆ. ಅವರ ಏಳಿಗೆಗಾಗಿ ಸರ್ಕಾರ ಆದ್ಯತೆ ಕೊಡಬೇಕು ಎಂದು ಹೇಳಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸರ್ಕಾರಿ ನೌಕರರು ತಮ್ಮ ಕುಟುಂಬದ ಎಷ್ಟೋ ಸಮಸ್ಯೆಗಳು ಇದ್ದರೂ, ಅದನ್ನು ಹೊರಗಡೆ ತೋರಿಸಿಕೊಳ್ಳದೆ, ಸಾರ್ವಜನಿಕರ ಕೆಲಸಗಳಿಗೆ ಮೊದಲ ಆದ್ಯತೆಯನ್ನು ನೀಡುತ್ತಾರೆ ಎಂದು ಹೇಳಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ನೌಕರರು ಮತ್ತು ರಾಜಕೀಯ ಪಕ್ಷದವರು ರಥೋತ್ಸವದ ಎರಡು ಗಾಲಿ ಇದ್ದಂತೆ. ರಾಜ್ಯದಲ್ಲಿ ಸರ್ಕಾರಿ ನೌಕರರ ಸಂಘವು ಬಲಿಷ್ಠವಾದ ಶಕ್ತಿಯನ್ನು ಹೊಂದಿದೆ ಎಂದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿ. ಪಾಲಾಕ್ಷ ಮಾತನಾಡಿ, ರಾಜ್ಯದಲ್ಲಿ ಎನ್.ಪಿ.ಎಸ್. ವ್ಯವಸ್ಥೆ ತೊಲಗಿಸಿ ಓ.ಪಿ.ಎಸ್ ವ್ಯವಸ್ಥೆಗೆ ಸರ್ಕಾರ ಮುಂದಾಗಬೇಕು. ಜೊತೆಗೆ ಖಾಲಿ ಇರುವ 2 ಲಕ್ಷದ 60 ನೌಕರರನ್ನು ನೇಮಕಾತಿ ಮಾಡಬೇಕು ಎಂದು ಒತ್ತಾಯಿಸಿದರು.

ಹರಿಹರ ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಮಾತನಾಡಿ, ಎಲ್ಲರೂ ಉತ್ತಮ ಸಹಕಾರ ನೀಡುತ್ತಿರುವುದರಿಂದ ಇಂದು ನೂತನ ಕಟ್ಟಡ ನಿರ್ಮಾಣ ಮಾಡಿ ಉದ್ಘಾಟನೆ ಮಾಡಲಾಯಿತು ಎಂದು ಹೇಳಿದರು. ರಾಷ್ಟ್ರೀಯ ಹೊಸ ಶಿಕ್ಷಣ ನೀತಿ ಬಗ್ಗೆ ಶಿವಮೊಗ್ಗದ ಡಾ. ಜಿ.ವಿ. ಹರಿಪ್ರಸಾದ್ ಉಪನ್ಯಾಸ ನೀಡಿದರು.

ಬಿಇಓ ಬಿ.ಸಿ. ಸಿದ್ದಪ್ಪ, ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಜಿಲ್ಲಾ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಎಪಿಎಂಸಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ಪ್ರಾಥಮಿಕ ಶಾಲೆ ಸಂಘದ ಅಧ್ಯಕ್ಷ ಚಂದ್ರಪ್ಪ ದೊಗ್ಗಳ್ಳಿ, ಸಿಡಿಪಿಓ ನಿರ್ಮಲ, ಎನ್.ಪಿ.ಎಸ್. ಸಿದ್ದಣ್ಣ, ತಿಪ್ಪಣ್ಣ ರಾಜ್, ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಟಿ. ಮಂಜುನಾಥ್, ಖಜಾಂಚಿ ಪಿ. ಶಿವಮೂರ್ತಿ, ರಾಜ್ಯ ಪರಿಷತ್ ಸದಸ್ಯ ವಿಜಯ ಮಹಾಂತೇಶ್, ಗೌರವ ಅಧ್ಯಕ್ಷರಾದ ಎಂ. ಉಮ್ಮಣ್ಣ, ಎ.ಕೆ. ಭೂಮೇಶ್, ಉಪಾಧ್ಯಕ್ಷ ಶಿವಕುಮಾರಸ್ವಾಮಿ, ವೈ.ಪಿ. ಸಾಕಮ್ಮ, ಪ್ರಕಾಶ್, ಹರೀಶ್ ನೋಟಗಾರ, ಶಾಮನೂರು ರಾಮನಗೌಡ, ಡಿ.ಎಸ್. ಅರವಿಂದ್, ಸಾಹಿತಿ ಸುಮತಿ ಉಪಸ್ಥಿತರಿದ್ದರು.

# ನಾನು ಮತ್ತೆ 'ಸಿಎಂ' ಹುದ್ದೆ ಆಕಾಂಕ್ಷಿ ಅಲ್ಲ

ಬೆಂಗಳೂರು, ಮಾ. 11 - ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಮುಖಂಡ ಹೆಚ್.ಡಿ.ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾಗಲು ನಿರಂತರ ಪ್ರಯತ್ನ ನಡೆಸಿದ್ದರೆ, ಬಿ.ಎಸ್.ಯಡಿಯೂರಪ್ಪ ಮಾತ್ರ ನಾನು ಮತ್ತೆ ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿ ಅಲ್ಲ ಎಂದು ವಿಧಾನಸಭೆಯಲ್ಲೇ ಇಂದು ಸ್ಪಷ್ಟಪಡಿಸಿದ್ದಾರೆ.

ಆಯವ್ಯಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಸ್ವಾರಸ್ಯಕರವಾಗಿ ಪ್ರಸಕ್ತ ರಾಜಕೀಯ ಮತ್ತು ಸರ್ಕಾರದ ಕಾರ್ಯಕ್ರಮಗಳನ್ನು ಎಳೆಎಳೆಯಾಗಿ ಬಿಡಿಸಿಡುವ ಮಧ್ಯೆಯೇ ತಮ್ಮ ಅಚಲ ನಿರ್ಧಾರವನ್ನು ಪ್ರಕಟಿಸಿದರು.

ಈ ಹೇಳಿಕೆ ಮೂಲಕ ಮುಂಬರುವ ಸಂಭಾವ್ಯ ಬಿಜೆಪಿ ಆಡಳಿತದಲ್ಲಿ ತಮ್ಮ ಪಾಲು ಏನೂ ಇರುವುದಿಲ್ಲ ಎಂಬ ಸಂದೇಶವನ್ನು ನೀಡಿದರು.

ಬಸವರಾಜ ಬೊಮ್ಮಾಯಿ ನಾಯಕತ್ವದಲ್ಲೇ ಮುಂಬರುವ ವಿಧಾನಸಭಾ ಚುನಾವಣೆ ಎದುರಿಸಿ ಬಿಜೆಪಿಯನ್ನು ಅಧಿಕಾರಕ್ಕೆ ತಂದು ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರೆಸಲಾಗುವುದೆಂದು ಇದೇ ಸಂದರ್ಭದಲ್ಲಿ ಘೋಷಿಸಿದರು.



ಬೊಮ್ಮಾಯಿ ಅವರು ಮಂಡಿಸಿದ ಬಜೆಟ್, ಪಕ್ಷದ ಕಾರ್ಯಕ್ರಮಗಳನ್ನು ಇಟ್ಟುಕೊಂಡು, ಎಲ್ಲ ಮುಖಂಡರೊಂದಿಗೆ ರಾಜ್ಯಾದ್ಯಂತ ಪ್ರವಾಸ ಮಾಡಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ. ನೀವು ನಿಮ್ಮ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಪ್ರವಾಸಕ್ಕೆ ಬನ್ನಿ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಯಡಿಯೂರಪ್ಪ ಹೇಳಿದರು.

ದೇಶದ ಜನ ಪ್ರಧಾನಿ ಮೋದಿ ಮತ್ತು ಬಿಜೆಪಿ ಪರವಾಗಿದ್ದಾರೆ, ಮುಂದಿನ ಚುನಾವಣೆಯಲ್ಲಿ ನಾವು ಒಗ್ಗಟ್ಟಿನಿಂದ ಹೋರಾಟ ಮಾಡಿ 130 ರಿಂದ 140 ಸ್ಥಾನಗಳಲ್ಲಿ 100ಕ್ಕೆ ನೂರರಷ್ಟು ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗುತ್ತೇವೆ, ಮತ್ತೆ ಬಿಜೆಪಿ ಸರ್ಕಾರ ತರಲು ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡುತ್ತೇವೆ ಎಂದರು.

## ಪೇಟಿಎಂ ಹೊಸ ಖಾತೆ ತೆರೆಯದಂತೆ ನಿರ್ಬಂಧ

ಮುಂಬೈ, ಮಾ. 11 – ಪೇಟಿಎಂ ಪೇಮೆಂಟ್ ಬ್ಯಾಂಕ್ ಹೊಸ ಖಾತೆಗಳನ್ನು ತೆರೆಯದಂತೆ ರಿಸರ್ವ್ ಬ್ಯಾಂಕ್ ಮತ್ತೊಮ್ಮೆ ನಿರ್ಬಂಧಿಸಿದೆ. ಉಸ್ತುವಾರಿ ವಿಷಯಗಳ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ಹಿಂದೆಯೂ ಒಂದು ಬಾರಿ ಖಾತೆ ತೆರೆಯದಂತೆ ಪೇಟಿಎಂ ಮೇಲೆ ನಿರ್ಬಂಧ ಹೇರಲಾಗಿತ್ತು. ಕಂಪನಿಯ ಆದಾಯ ತೆರಿಗೆ ವ್ಯವಸ್ಥೆಯ ಸಮಗ್ರ ಪರಿಶೀಲನೆಗಾಗಿ ಐ.ಟಿ. ಲೆಕ್ಕಪರಿಶೋಧನಾ ಉದ್ಯಮವೊಂದನ್ನು ನೇಮಿಸುವಂತೆಯೂ ಆರ್.ಬಿ.ಐ. ಹೇಳಿದೆ.

## ಪ್ರಾಣಿ ಬಲಿ ನಿಷೇಧ

**(1ನೇ ಪುಟದಿಂದ)** ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸಾರ್ವಜನಿಕ ಹಿತದೃಷ್ಟಿ, ಪರಿಸರ ನೈರ್ಮಲ್ಯ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಜಾತ್ರೆ ಸಂದರ್ಭದಲ್ಲಿ ದೇವರ ಹೆಸರಿನಲ್ಲಿ ಯಾವುದೇ ರೀತಿಯ ಪ್ರಾಣಿ ಬಲಿ ನೀಡುವುದನ್ನು ಮತ್ತು ಇತರೆ ಪ್ರಾಣಿಗಳನ್ನು ತೆಗೆದುಕೊಂಡು ಬರುವುದು, ಮಾರಕಾಸ್ತ್ರಗಳನ್ನು ತರುವುದು ಹಾಗೂ ಇತರೆ ಅನಾಗರಿಕ ಪದ್ಧತಿಗಳನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

# ಮಲೇಬೆನ್ನೂರಿಗೆ ಪ್ರಮೋದ್ ಮುತಾಲಿಕ್ ಭೇಟಿ



ಮಲೇಬೆನ್ನೂರು, ಮಾ.11- ಪಟ್ಟಣದಲ್ಲಿ ಇತ್ತೀಚೆಗೆ ಹಿಜಾಬ್ ವಿವಾದ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಚಿತ್ರ ಹಾಕಿದ್ದ ಎನ್ನಲಾದ ಕಾರಣಕ್ಕೆ ಹಲ್ಲೆಗೊಳಗಾಗಿದ್ದ ದಿಲೀಪ್ ಮನೆಗೆ ಶನಿವಾರ ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಭೇಟಿ ನೀಡಿ, ತಂದೆ-ತಾಯಿಗೆ ಆತ್ಮಸ್ಥೈರ್ಯ ಹೇಳಿದರು.

ಸಿಜಿ ಆಸ್ಪತ್ರೆಯಲ್ಲಿರುವ ದಿಲೀಪ್‌ನನ್ನು ಭೇಟಿ ಮಾಡಿ, ಆರೋಗ್ಯ ವಿ ಚಾರಿಸಿ ಬಂದಿದ್ದೇನೆ. ಭಾನುವಾರ ಅಥವಾ ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾನೆ.

ಘಟನೆಯಿಂದ ಯಾರು ಹೆದರಬೇಡಿ, ನಿಮ್ಮ ರಕ್ಷಣೆಗೆ ನಾವಿದ್ದೇನೆ. ತಪ್ಪು ಮಾಡಿದ್ದರೆ ಶಿಕ್ಷೆ ನೀಡಲು ಕಾನೂನು ಇದೆ. ಆದರೆ, ಇನ್ನೊಂದು ಗುಂಪಿನವರು ಏಕಾಏಕಿ ದಿಲೀಪ್ ಮೇಲೆ ಹಲ್ಲೆ ಮಾಡಿ, ಎದೆಗೆ ತೀವಿದಿರುವುದನ್ನು ಮುತಾಲಿಕ್ ಖಂಡಿಸಿ, ತಪ್ಪಿತಸ್ಥರನ್ನು ಕೂಡಲೇ ಬಂಧಿಸುವಂತೆ ಸ್ಥಳದಲ್ಲಿದ್ದ ಪಿಎಸ್ಐ ರವಿಕುಮಾರ್ ಅವರನ್ನು ಒತ್ತಾಯಿಸಿದರು.

ತಾ. ಬಿಜೆಪಿಯಿಂದ ಹಿಂದುಳಿದ ವಿಭಾಗದ ಅಧ್ಯಕ್ಷ ಕೆಂಚನಹಳ್ಳಿ ಮಹೇಶ್, ಪ್ರಕಾಶಾಚಾರ್, ಪುರಸಭೆ ನಾಮಿನಿ ಸದಸ್ಯರಾದ ಪಿ.ಆರ್.ರಾಜು, ಎ.ಕೆ.ಲೋಕೇಶ್ ದೊರೆ, ಕಜ್ಜರಿ ಹರೀಶ್, ಜಿ.ರಂಗನಾಥ್, ದಿಲೀಪ್ ತಂದೆ ಮಾಳಗಿಮನೆ ಮಂಜಣ್ಣ ಈ ವೇಳೆ ಹಾಜರಿದ್ದರು.

# ರಾಜ್ಯದ ಮೂರು ಕಾಯ್ದೆಗಳ ವಾಪಸ್, ಬೆಳೆಗಳಿಗೆ ಬೆಲೆ

**(1ನೇ ಪುಟದಿಂದ)** ಕರೆ ನೀಡಿದ್ದಾರೆ. ರಿಯಲ್ ಎಸ್ಟೇಟ್ ಉದ್ಯಮಿಗಳು, ದೊಡ್ಡ ಕಂಪನಿಗಳಿಗೆ ನೆರವಾಗಲು ರಾಜ್ಯ ಸರ್ಕಾರ ಭೂ ಸುಧಾರಣಾ ಕಾಯ್ದೆ ಜಾರಿಗೆ ತಂದಿದೆ ಎಂದು ಆರೋಪಿಸಿದ ಅವರು, ಈ ಬಗ್ಗೆ ಜನರು ಜಾಗೃತರಾಗಬೇಕು. ಕಾಯ್ದೆಗಳನ್ನು ವಾಪಸ್ ಪಡೆಯದೇ ಹೋದರೆ 2023ರಲ್ಲಿ ಬ್ರಹ್ಮಾಸ್ತ್ರ ಬಿಡಬೇಕು ಎಂದರು. ಪರೋಕ್ಷವಾಗಿ ಅವರು ವಿಧಾನಸಭಾ ಚುನಾವಣೆ ಕುರಿತು ಪ್ರಸ್ತಾಪಿಸಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜನಸಂಗ್ರಾಮ ಪರಿಷತ್‌ನ ಶಿವನಕೆರೆ ಬಸವಲಿಂಗಪ್ಪ, ರಾಜ್ಯ ಸರ್ಕಾರದಲ್ಲಿ ಶೇ.40ರ ಭ್ರಷ್ಟಾಚಾರದ ಆರೋಪಗಳು ಕೇಳಿ ಬರುತ್ತಿವೆ. ರಾಜ್ಯದಲ್ಲಿ ರಾಜಕೀಯ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಭ್ರಷ್ಟಾಚಾರ ಈಗ ಯುದ್ಧದಂತೆ ರಾಜ್ಯಕ್ಕೆ ಹಾನಿ ತರುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮುಖಂಡರುಗಳಾದ ಬಲ್ಲೂರು ರವಿಕುಮಾರ್, ಹೊನ್ನೂರು ಮುನಿಯಪ್ಪ, ಆವರಗೆರೆ ರಂಗನಾಥ, ಅನೀಸ್ ಪಾಷ, ಹೆಚ್. ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.

## ಯೋಗಿ ಗೆಲುವನ್ನು ಹಿಟ್ಲರ್‌ಗೆ ಹೋಲಿಸಿದ ಹಿರೇಮಠ



ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ಸರ್ಕಾರ ಪುನರಾಯ್ಕೆಯಾಗಿರುವುದನ್ನು ಜರ್ಮನಿಯ ಅಡಾಲ್ಫ್ ಹಿಟ್ಲರ್ ಗೆಲುವಿಗೆ ಹೋಲಿಸಿರುವ ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್. ಹಿರೇಮಠ್, ಮುಂದೆ ಕರಾಳ ದಿನಗಳು ಬರಲಿವೆ ಎಂದಿದ್ದಾರೆ.

ಪತ್ರಕರ್ತನ ಮೇಲೆ ದೌರ್ಜನ್ಯ, ದಲಿತ ಮಹಿಳೆ ಮೇಲೆ ಅತ್ಯಾಚಾರ ಹಾಗೂ ಕೇಂದ್ರದ ಸಚಿವನ ಮಗ ರೈತರ ಮೇಲೆ ವಾಹನ ಹರಿಸಿದ ಘಟನೆಗಳ ನಂತರವೂ ಯೋಗಿ ಆದಿತ್ಯನಾಥ್ ಪುನರಾಯ್ಕೆಯಾಗಿದ್ದಾರೆ ಎಂದವರು ವಿಷಾದ ವ್ಯಕ್ತಪಡಿಸಿದ್ದಾರೆ.

ಪ್ರತಿಪಕ್ಷಗಳಿಗೂ ಸಹ ಮುಂದಿನ ದಾರಿಯ ಬಗ್ಗೆ ಸ್ಪಷ್ಟತೆ ಇಲ್ಲ. ಒಗ್ಗಟ್ಟು ಹಾಗೂ ಜನರ ಬಗ್ಗೆ ಪ್ರಾಮಾಣಿಕ ಕಳಕಳಿ ಇಲ್ಲ. ಇಂತಹ ಸಂದರ್ಭದಲ್ಲಿ ಜನರು ಜಾಗೃತರಾಗಬೇಕಿದೆ ಎಂದವರು ಅಭಿಪ್ರಾಯ ಪಟ್ಟರು.

# ಕಾಂಗ್ರೆಸ್‌ಗೆ ಕಾಯುವುದರಲ್ಲಿ ಅರ್ಥವಿಲ್ಲ

## ಪ್ರಾಂತೀಯ ಪಕ್ಷಗಳು ಬಿಜೆಪಿ ವಿರೋಧಿ ಮೈತ್ರಿ ರಚಿಸಬೇಕು

ಕೊಲ್ಕೊತಾ, ಮಾ. 11 – ಕಾಂಗ್ರೆಸ್ ಪಕ್ಷಕ್ಕೆ ಗೆಲ್ಲುವ ಕಿಚ್ಚಿನ ಕೊರತೆ ಇದೆ ಎಂದಿರುವ ಪಶ್ಚಿಮ ಬಂಗಾಳದ ಮುಖ್ಯಮತ್ರಿ ಮಮತಾ ಬ್ಯಾನರ್ಜಿ, ಆ ಪಕ್ಷಕ್ಕಾಗಿ ಕಾಯುವುದರಲ್ಲಿ ಅರ್ಥವಿಲ್ಲ. ಪ್ರಾಂತೀಯ ಪಕ್ಷಗಳು ಬಿಜೆಪಿ ವಿರೋಧಿ ಮೈತ್ರಿ ಕೂಟ ರಚಿಸಬೇಕಿದೆ ಎಂದಿದ್ದಾರೆ.

ಬಿಜೆಪಿ ವಿರುದ್ಧ ಹೋರಾಡಲು ಬಯಸುವ ಪಕ್ಷಗಳು ಜೊತೆಯಾಗಬೇಕಿದೆ. ಕಾಂಗ್ರೆಸ್ ಮೇಲೆ ಅವಲಂಬಿತವಾಗುವುದರಲ್ಲಿ ಅರ್ಥವಿಲ್ಲ. ಕಾಂಗ್ರೆಸ್ ಸಂಘಟನೆ ಹೊಂದಿದಾಗ ಗೆಲ್ಲುವ ಸಾಮರ್ಥ್ಯ ಹೊಂದಿತ್ತು. ಈಗ ಎಲ್ಲ ಕಡೆ ಸೋಲುತ್ತಿದೆ. ಅವರು ನಂಬಿಕೆ ಕಳೆದುಕೊಂಡಿದ್ದಾರೆ ಎಂದು ಮಮತಾ ಹೇಳಿದ್ದಾರೆ.

ಹಲವಾರು ಬಲಿಷ್ಠ ಪ್ರಾಂತೀಯ ಪಕ್ಷಗಳಿವೆ. ಪಕ್ಷಗಳು ಜೊತೆಯಾದರೆ ಪರಿಣಾಮಕಾರಿ ಶಕ್ತಿಯಾಗುತ್ತವೆ ಎಂದವರು ತಿಳಿಸಿದ್ದಾರೆ.

ಮಮತಾ ಬ್ಯಾನರ್ಜಿ ಅವರು ಈ ಹಿಂದೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಜೊತೆ ಮಾತನಾಡಿದ್ದರು. ಪ್ರತಿಪಕ್ಷಗಳ ಮುಖ್ಯಮಂತ್ರಿಗಳ ಸಭೆ ಕರೆಯುವ ಯೋಜನೆಯನ್ನೂ ಹೊಂದಿದ್ದರು. ಈ ಸಭೆಯ ಬಗ್ಗೆ ಉಳಿದವರು ನಿರ್ಧರಿಸಬೇಕಿದೆ ಎಂದು ಮಮತಾ ಹೇಳಿದ್ದಾರೆ.



ಮಮತಾ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ, ಕಾಂಗ್ರೆಸ್ ಸೋಲಿಸಲಿಕ್ಕಾಗಿ ತೃಣಮೂಲ ಕಾಂಗ್ರೆಸ್ ಗೋವಾದಲ್ಲಿ ಸ್ಪರ್ಧಿಸಿತ್ತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಮುಕ್ತ ಭಾರತ ಎಂದರೆ, ಮಮತಾ ಅವರು ಕಾಂಗ್ರೆಸ್ ಮುಕ್ತ ವಿಪಕ್ಷ ಮೈತ್ರಿಕೂಟ ಎನ್ನುತ್ತಿದ್ದಾರೆ ಎಂದು ಆಕ್ಷೇಪಿಸಿದ್ದಾರೆ.

# ನಾಳೆಯಿಂದ ನಾಯಕನಹಟ್ಟಿ ಶ್ರೀ ತಿಪ್ಪೇರುದ್ರ ಸ್ವಾಮಿ ರಥೋತ್ಸವ

ಚಿತ್ರದುರ್ಗ, ಮಾ.11- ಚಳ್ಳಕೆರೆ ತಾಲ್ಲೂಕು ನಾಟಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿಯ ರಥೋತ್ಸವವು ಇದೇ ದಿನಾಂಕ 20ರ ಭಾನುವಾರ ಜರುಗಲಿದೆ.

ನಾಡಿದ್ದು ದಿನಾಂಕ 13ರ ಭಾನುವಾರ ದೇವಸ್ಥಾನದಲ್ಲಿ ಮಹಾಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹವಾಚನ, ಮಂಟಪ ಪೂಜೆ, ಪಂಚಕಳಸ ಸ್ಥಾಪನೆ, ಕಂಕಣಧಾರಣೆ, ಪ್ರಾಕಾರೋತ್ಸವ, ದಿನಾಂಕ 14ರ ಸೋಮವಾರ ವಾರೋತ್ಸವ ನಂತರ ಸರ್ಪವಾಹನೋತ್ಸವ, ದಿ. 15ರ ಮಂಗಳವಾರ ರಾತ್ರಿ ಮಯೂರ ವಾಹನೋತ್ಸವ,



ದಿನಾಂಕ 16ರ ಬುಧವಾರ ಸಂಜೆ ಶ್ರೀಗಳ ರಥಕ್ಕೆ ಕಳಸ ಸ್ಥಾಪನೆ, ರಾತ್ರಿ ಗಜವಾಹನೋತ್ಸವ, ದಿನಾಂಕ 17ರ ಗುರುವಾರ ರಾತ್ರಿ ಸಿಂಹವಾಹ ನೋತ್ಸವ, ದಿನಾಂಕ 18ರ ಶುಕ್ರವಾರ ರಾತ್ರಿ ಅಶ್ವವಾಹನೋತ್ಸವ, ದಿನಾಂಕ 19ರ ಶನಿವಾರ ಶ್ರೀಗಳ ರಥಕ್ಕೆ ತೈಲಾಭಿಷೇಕವಿರುತ್ತದೆ. ದಿನಾಂಕ 20ರ ಭಾನುವಾರ ಜನಪದ ಕಲಾವಿದರಿಂದ ವೈವಿಧ್ಯಮಯ ಮೆರವಣಿಗೆಯೊಂದಿಗೆ ಪ್ರಾತಃಕಾಲ ವೃಷಭ ವಾಹನಯುತ ಚಿಕ್ಕ ರಥೋತ್ಸವ ನಂತರ ನಾಯಕನಹಟ್ಟಿ, ತಳಕು, ಮನ್ನೆಕೋಟೆ ಹಾಗೂ ಸಮಸ್ತ ಭಕ್ತಾದಿಗಳಿಂದ ಮಹಾಮಂಗಳಾರತಿಯೊಂದಿಗೆ ಮಧ್ಯಾಹ್ನ 3 ರಿಂದ ದೊಡ್ಡ ರಥೋತ್ಸವ ಜರುಗಲಿದೆ.

ದಿನಾಂಕ 21ರ ಸೋಮವಾರ ವಾರೋತ್ಸವ ನಂತರ ರಾತ್ರಿ ವಸಂತೋತ್ಸವ, ಹಾಗೂ ದಿನಾಂಕ 28ರ ಸೋಮವಾರ ಮರಿಪರಿಷೆ, ರಾತ್ರಿ ಸಕಲ ಬಿರುದಾವಳಿಗಳೊಡನೆ ವಾರೋತ್ಸವ ಜರುಗಲಿದೆ.

# ಉಚ್ಚಂಗೆಮ್ಮ ದೇವಸ್ಥಾನದ ಅಭಿವೃದ್ಧಿಗೆ ಕ್ರಮ



**(1ನೇ ಪುಟದಿಂದ)** ದೇವಸ್ಥಾನಗಳಲ್ಲಿ ಪೂಜ್ಯನೀಯ ಭಾವನೆ ಹೊಂದಿದ್ದಾರೆ. ಕೋಟಿ ಹಣ ಕೊಟ್ಟರೂ ಸಿಗದ ಶಾಂತಿ, ನೆಮ್ಮದಿ ದೇವಸ್ಥಾನಗಳಲ್ಲಿ ದೊರೆಯುತ್ತಿದೆ ಎಂದು ಸಚಿವೆ ಜೊಲ್ಲೆ ನುಡಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಶಾಸಕ ಎಸ್.ವಿ. ರಾಮಚಂದ್ರಪ್ಪ ಮಾತನಾಡಿ, ಉತ್ಸವಾಂಬ ದೇವಿಯ ಸನ್ನಿಧಿಗೆ ಶಶಿಕಲಾ ಜೊಲ್ಲೆಯವರ ಆಗಮನ ಸಂತಸ ತಂದಿದೆ. ಭದ್ರಾ ಮೇಲ್ದಂಡೆ ಯೋಜನೆಯಡಿ ರಾಷ್ಟ್ರೀಯ ಜಲ ನಿಗಮದಿಂದ 2.4 ಟಿಎಂಸಿ ಮಾನ್ಯತೆ ಕೊಡಿಸಿದ ಸಂಸದ ಸಿದ್ದೇಶ್ ಅವರು ನಮಗೆ ಸ್ಫೂರ್ತಿ ಆಗಿದ್ದಾರೆ.

ಶಕ್ತಿ ದೇವತೆ ಉಚ್ಚಂಗೆಮ್ಮ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳಿಗೆ ಕುಡಿಯುವ ನೀರಿಗಾಗಿ 1ಕೋಟಿ ಹಾಗೂ ಹಾಲಮ್ಮನ ತೋಪಿನ ಸುಸಜ್ಜಿತ ರಸ್ತೆ ನಿರ್ಮಾಣಕ್ಕೆ 2 ಕೋಟಿ ಅನುದಾನ ನೀಡಲಾಗಿದೆ ಎಂದರು.

ಸಂಸದ ಜಿಎಂ ಸಿದ್ದೇಶ್ವರ್ ಮಾತನಾಡಿ, ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ 57 ಕೆರೆ ತುಂಬಿಸುವ ಯೋಜನೆಯ ಪೈಪ್ ಲೈನ್ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಉದ್ಘಾಟನೆಯನ್ನು ಹಾಗೂ ಭದ್ರಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಜಲ ನಿಗಮದ ಅನುಮೋದನೆ ಪಡೆದಿದ್ದು. ಏಪ್ರಿಲ್ ತಿಂಗಳಲ್ಲಿ ಜಗಳೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟನೆಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಉಪವಿಭಾಗಾಧಿಕಾರಿ ಎಚ್.ಜಿ.ಚಂದ್ರಶೇಖರಯ್ಯ, ಡಿವೈಎಸ್‌ಪಿ ಹಾಲಮೂರ್ತಿರಾವ್, ಗಾಯತ್ರಿ ಸಿದ್ದೇಶ್ವರ್, ಇಂದಿರಾ ರಾಮಚಂದ್ರ, ದಾವಣಗೆರೆ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಜಗಳೂರು ತಾಲ್ಲೂಕು ಬಿಜೆಪಿ ಅಧ್ಯಕ್ಷ ಪಲ್ಲಾಗಟ್ಟಿ ಮಹೇಶ್, ಗ್ರಾ.ಪಂ ಅಧ್ಯಕ್ಷರಾದ ಸಾಕಮ್ಮ, ಉಪಾಧ್ಯಕ್ಷೆ ಕಾಳಮ್ಮ, ಮುಖಂಡರಾದ ಕೆಂಚನ ಗೌಡ್ರು, ಸೊಕ್ಕೆ ನಾಗರಾಜ್, ವೈ.ಡಿ.ಅಣ್ಣಪ್ಪ, ಯಶವಂತರಾವ್ ಜಾಧವ್, ಜೆ.ಎಂ. ಗೋಪಿ ನಾಯ್ಕ, ಹನುಮಂತಪ್ಪ, ಕೆಂಚಪ್ಪ, ಸಿದ್ದಪ್ಪ, ಫಣಿಯಾಪುರ ಲಿಂಗರಾಜ್, ಬಾಲೇನಹಳ್ಳಿ ಕೆಂಚನ ಗೌಡ, ವಿಜೇಂದ್ರ ಸಿಂಹ, ಕರಡಿ ದುರ್ಗದ ಚೌಡಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

## ಬಿದ್ದ ಕ್ಷಿಪಣಿ

**(1ನೇ ಪುಟದಿಂದ)** ಸಾನಿಕ್ ವೇಗದ ವಾಹನ ಭಾರತದ ಕಡೆಯಿಂದ ಬಂದಿತ್ತು. 6.50ರ ಸಮಯದಲ್ಲಿ ಅದು ಮಿಯಾ ಚನ್ನು ಬಳಿ ಬಿದ್ದಿತ್ತು. ಇದು ಕ್ಷಿಪಣಿ ಇರಬಹುದು. ಆದರೆ, ಅದರಲ್ಲಿ ಶಸ್ತ್ರ ಇರಲಿಲ್ಲ ಎಂದು ಇಫ್ತಿಕಾರ್ ಹೇಳಿದ್ದರು.

ಭಾರತದ ಅಧಿಕಾರಿಗಳು ಕ್ಷಿಪಣಿಯ ಹೆಸರು ಹೇಳಿಲ್ಲ. ಆದರೆ, ಪಾಕಿಸ್ತಾನದ ಸೈನ್ಯ ನೀಡಿರುವ ವಿವರವನ್ನು ಪರಿಗಣಿಸಿದಾಗ ಅದು ಬ್ರಹ್ಮೋಸ್ ಕ್ಷಿಪಣಿ ಎಂಬ ಇಂಗಿತ ದೊರೆಯುತ್ತಿದೆ. ಆದರೆ, ಈ ಬಗ್ಗೆ ಇನ್ನೂ ಖಚಿತವಾಗಿ ವಿವರ ಪ್ರಕಟಿಸಿಲ್ಲ.

ಈ ಘಟನೆಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಪಾಕಿಸ್ತಾನದ ವಿದೇಶಾಂಗ ಸಚಿವ ಷಾ ಮಹಮೂದ್ ಕುರೇಶಿ, ಸೌದಿ ಹಾಗೂ ಕತಾರ್ ವಿಮಾನಗಳು ಹಾಗೂ ದೇಶೀಯ ವಿಮಾನಗಳಿಗೆ ಅಪಾಯ ಎದುರಾಗಿತ್ತು ಎಂದಿದ್ದಾರೆ. ಈ ಘಟನೆಯ ಬಗ್ಗೆ ಪಿ-5 (ಚೀನ, ಫ್ರಾನ್ಸ್, ರಷ್ಯಾ, ಬ್ರಿಟನ್ ಹಾಗೂ ಅಮೆರಿಕ) ರಾಯಭಾರಿಗಳಿಗೆ ಮಾಹಿತಿ ನೀಡಲಾಗಿದೆ. ಭಾರತ ಇದಕ್ಕೆ ಉತ್ತರ ನೀಡಬೇಕು ಎಂದಿದ್ದಾರೆ.


ಕರ್ನಾಟಕ ಸರ್ಕಾರ

ಕರ್ನಾಟಕ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್‌ರಾಜ್ ಇಲಾಖೆ

## ತಾಲ್ಲೂಕು ಪಂಚಾಯತ್ ಕಾರ್ಯಾಲಯ, ನ್ಯಾಮತಿ

ತಾಲ್ಲೂಕು: ನ್ಯಾಮತಿ ಜಿಲ್ಲಾಪಂಚಾಯತ್ : ದಾವಣಗೆರೆ

ನಂ: ತಾ.ಪಂ.ನ್ಯಾ/ಉಖಾಯೋ/ಸ.ನಿ.(ಗ್ರಾ.ಉ)ಮಾ.ಬಾ/ಸಿ.ಆರ್/2021-22 ದಿನಾಂಕ:11.03.2022.

### :: ಅಲ್ಪಾವಧಿ ದರಪಟ್ಟಿ ಪ್ರಕಟಣೆ ::

**ವಿಷಯ:** ಸಹಾಯಕ ನಿರ್ದೇಶಕರು (ಗ್ರಾ,ಉ)ತಾಲ್ಲೂಕು ಪಂಚಾಯತಿ ನ್ಯಾಮತಿ ಇವರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ದರಪಟ್ಟಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ:1.ಸರ್ಕಾರದ ಪತ್ರ ಸಂ:ಖಆಅ/ಇಉS/141/2021(ಇ-530205), ದಿ:01.09.2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ನಿರ್ದೇಶಕರು (ಗ್ರಾ.ಉ) ತಾಲ್ಲೂಕು ಪಂಚಾಯಿತಿ ನ್ಯಾಮತಿ ಇವರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿಗಳ ವೀಕ್ಷಣೆ ಮಾಡಲು ವಾಹನದ ಅವಶ್ಯಕತೆ ಇರುತ್ತದೆ.ಆದ್ದರಿಂದ ಪ್ರತಿ ಮಾಹೆಗೆ ಗರಿಷ್ಠ 30,000/-ರೂ,ಗಳ ಮಿತಿಯಲ್ಲಿ ಮಾಸಿಕ ಬಾಡಿಗೆ ಆಧಾರದ ವಾಹನವನ್ನು ಚಾಲಕರೊಂದಿಗೆ ಒದಗಿಸಲು ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು ಆಸಕ್ತ ಸಂಸ್ಥೆಗಳು ದರಪಟ್ಟಿಗಳನ್ನು ದಿನಾಂಕ:29.03.2022ರ ಸಂಜೆ 5-00ಗಂಟೆ ಒಳಗಾಗಿ ಕೆಳಕಂಡ ಷರತ್ತಿಗೊಳಪಟ್ಟು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ನಂತರ ಬಂದಂತಹ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು.

| | |
|---|---|
| ಟೆಂಡರ್ ಪ್ರಕಟಣೆ ಹೊರಡಿಸಿದ ದಿನಾಂಕ: | 12.03.2022 |
| ಟೆಂಡರ್ ಫಾರಂ ನೀಡಲು ಪ್ರಾರಂಭಿಸುವ ದಿನಾಂಕ: | 14.03.2022 |
| ಟೆಂಡರ್ ಫಾರಂ ಪಡೆಯಲು ಅಂತಿಮ ದಿನಾಂಕ: | 29.03.2022 |
| ಟೆಂಡರ್ ಫಾರಂ ಭರ್ತಿ ಮಾಡಿ ಸಲ್ಲಿಸುವ ದಿನಾಂಕ ಮತ್ತು ಸಮಯ | 29.03.2022 |
| ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | 30.03.2022 |
| ಟೆಂಡರ್ ಲಕೋಟೆ ಮೇಲೆ ನಮೂದಿಸಬೇಕಾದ ವಿಳಾಸ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಕಾರ್ಯಾಲಯ, ನ್ಯಾಮತಿ |
| ಸಂಪರ್ಕಿಸಬೇಕಾದ ವಿಳಾಸ : | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಕಾರ್ಯಾಲಯ, ನ್ಯಾಮತಿ |

**ಷರತ್ತುಗಳು :** 1. 2018, 2019, ಮತ್ತು 2020 ಸಾಲಿನ ಮಾದರಿಯ ಸ್ವಿಫ್ಟ್/ಇಟಿಒಎಸ್ ವಾಹನ ಆಗಿರಬೇಕು.
2. ಚಾಲ್ತಿ ವರ್ಷದ ವಿಮೆ ಹೊಂದಿರಬೇಕು. 3. ಚಾಲ್ತಿ ವರ್ಷಕ್ಕೆ ತೆರಿಗೆ ಪಾವತಿಸಿರಬೇಕು/ಟ್ಯಾಕ್ಸ್ ಕಾರ್ಡ್ ಹೊಂದಿರಬೇಕು.
4. ವಾಹನ ಸುಸ್ಥಿತಿಯಲ್ಲಿರಬೇಕು ಮತ್ತು ಸಾರಿಗೆ ಇಲಾಖೆಯಿಂದ ದೃಢೀಕರಣ (ಎಫ್.ಸಿ) ನೀಡಬೇಕು.
5. ವಾಹನವು ಹಳದಿ ಬೋರ್ಡ್ ಅಡಿಯಲ್ಲಿ ರಿಜಿಸ್ಟ್ರೇಷನ್ ಆಗಿರಬೇಕು. 6. ವಾಹನದ ಯಾವುದೇ ತರಹದ ದುರಸ್ಥಿ ನಿರ್ವಹಣೆ ಮತ್ತು ತಗಲುವ ಇಂಧನ ಮಾಲೀಕರದ್ದೇ ಆಗಿರುತ್ತದೆ. 7. ಅನುಭವಿ ವಾಹನ ಚಾಲಕರಿರಬೇಕು ಮತ್ತು ಚಾಲ್ತಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಮತ್ತು ವಾಹನ ಚಾಲಕರಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ. 8. ಕಛೇರಿಯ ನಿಗದಿತ ಅವಧಿಯಲ್ಲಿ ವಾಹನವನ್ನು ತರುವುದು. 9. ಶೇ. 2% ರಷ್ಟು ಆದಾಯ ತೆರಿಗೆಯನ್ನು ಕಡಿತಗೊಳಿಸಲಾಗುವುದು. 10. ಪ್ರತಿ ತಿಂಗಳ ಲಾಗ್ ಬುಕ್ ನಿರ್ವಹಣೆ ಮಾಡುವುದು ಹಾಗೂ ಜಿ.ಎಸ್.ಟಿ ಹೊಂದಿರುವ ಬಿಲ್ಲನ್ನು ಸಲ್ಲಿಸುವುದು. 11. ಅನುದಾನ ಲಭ್ಯತೆ ಆಧಾರದ ಮೇಲೆ ಹಣ ಪಾವತಿಸಲಾಗುವುದು.

ತಮ್ಮ ವಿಶ್ವಾಸಿ

**ಕಾರ್ಯನಿರ್ವಾಹಕ ಅಧಿಕಾರಿಗಳು,** ತಾಲ್ಲೂಕು ಪಂಚಾಯತ್ ನ್ಯಾಮತಿ.



## ಹದಿನಾಲ್ಕನೇ ವರ್ಷದ ಪುಣ್ಯಸ್ಮರಣೆ



**ನೇತ್ರದಾನಿ ಚಿ|| ಕೆ.ಆರ್.ಗಿರೀಶ್ ಹುಲಗಿ**

ಜನನ : 24.12.1976, ಮರಣ : 12.03.2008

*ಹಿರಿಯರೆನ್ನದೇ, ಕಿರಿಯರೆನ್ನದೇ, ಬಡವರೆನ್ನದೇ, ಧನಿಕರೆನ್ನದೇ, ಎಲ್ಲರ ಸ್ನೇಹದಿ ನಗು-ನಗುತ ನಮ್ಮೆಲ್ಲರ ಮನಕೆ ಹತ್ತಿರವಾಗಿ, ನಿನ್ನ ಬದುಕಿನ ಆರಂಭದ ಪುಟಗಳನ್ನು ಬರೆಯುತ್ತಿದ್ದಂತೆ, ಕೊನೆಯ ಪುಟಗಳ ಬರೆದು ನನಗೆ ನೀನು ಪ್ರಿಯನೆಂದು ಶಿವನು ಕರೆದೊಯ್ದು ಇಂದಿಗೆ ಹದಿನಾಲ್ಕು ವರ್ಷಗಳಾದವು. ನಿನ್ನ ಬದುಕು ಇಲ್ಲವಾದರೂ ನಿನ್ನ ನೆನಪು ಅಮರ. ಮನೆಯವರಿಗೆಲ್ಲರಿಗೂ ಬೆಳಕಾಗಿ, ಅಂಧರಿಗೆ ದೃಷ್ಟಿಕೊಟ್ಟು, ಮಿಂಚಿ ಮರೆಯಾದ*

**ಚಿ|| ಕೆ.ಆರ್. ಗಿರೀಶ್**

ಸದಾ ನಿನ್ನ ನೆನಪಿನಂಗಳದಲ್ಲಿ ನಲುಗುತ್ತಿರುವ,

**ಅಣ್ಣ – ಮಗನಾದ ಸೃಜನ್, ಸುಮನ್, ಸುರಭಿ ಮತ್ತು ಪಾವನಿ ಸಹೋದರಿಯರು ಮತ್ತು ಭಾವಂದಿರು, ಮಾಮನಾದ ಕೆ.ಜಿ.ಶಿವಕುಮಾರ್ ಮತ್ತು ಕುಟುಂಬ ವರ್ಗ ಸ್ನೇಹಿತರು, ಗಂಡಗಾಳೆ ಬಂಧುಗಳು ಹಾಗೂ ಮಿತ್ರರು.**

**ಹುಲಗಿ ಸ್ಟುಡಿಯೋ ಮತ್ತು ಹುಲಗಿ ಎಂಟರ್‌ಪ್ರೈಸಸ್,** ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.


## ನಾಗರಕಟ್ಟೆ ಬ್ಯಾಡಗಿ ಶಿವಪ್ಪ ನಿಧನ



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಾಸಿ ಬ್ಯಾಡಗಿ ಶಿವಪ್ಪ (86) ಇವರು ದಿನಾಂಕ: 11.3.2022 ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಐವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ: 12.3.2022 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

## ಕೈ ಹಿಡಿಯಲು ಹಿಂಜರಿಕೆ

**(1ನೇ ಪುಟದಿಂದ)** ಕಾಂಗ್ರೆಸ್ ಸೇರಲು ಮುಂದಾಗಿದ್ದವರು, ಬಹಿರಂಗವಾಗಿ ಹೇಳಿಕೆಯನ್ನೂ ನೀಡಿರಲಿಲ್ಲ, ತೋರಿಸಿಕೊಂಡೂ ಇರಲಿಲ್ಲ.

ಚುನಾವಣಾ ವೇಳೆಗೆ ತಾವು ಬಿಜೆಪಿ ತೊರೆದು ಕಾಂಗ್ರೆಸ್ ಸೇರುವುದಾಗಿ ಸಚಿವರು, ಶಾಸಕರು, ಸಿದ್ದರಾಮಯ್ಯ ಮತ್ತು ಶಿವಕುಮಾರ್‌ಗೆ ಭರವಸೆಯನ್ನೂ ನೀಡಿದ್ದರು. ಅಷ್ಟೇ ಅಲ್ಲದೆ, ತಮ್ಮ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಮುಖಂಡರು ಚುನಾವಣೆಗೆ ತಯಾರಿ ನಡೆಸದಂತೆ ಮತ್ತು ಯಾರಿಗೂ ಟಿಕೆಟ್‌ನ ಭರವಸೆ ನೀಡಬಾರದೆಂದು ಸೂಚಿಸಿದ್ದರು.

ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಬಂದ ನಂತರ ಪಕ್ಷ ವಲಸೆಗೆ ಮುಂದಾಗಿದ್ದವರು ಮತ್ತೆ ಮರುಚಿಂತನೆಯಲ್ಲಿ ತೊಡಗಿದ್ದಾರೆ. ಇವರಲ್ಲಿ ಕೆಲವರಂತೂ ತಾವು ಈಗಿರುವ ಪಕ್ಷದಲ್ಲೇ ಉಳಿದುಕೊಳ್ಳುವ ತೀರ್ಮಾನಕ್ಕೇ ಬಂದಿದ್ದಾರೆ. ಈ ಫಲಿತಾಂಶದಿಂದ ರಾಜ್ಯ ಕಾಂಗ್ರೆಸ್‌ಗೆ ಸ್ವಲ್ಪ ಹಿನ್ನಡೆಯಾದಂತೆ ಕಂಡುಬರುತ್ತಿದೆ, ನಾಯಕರಲ್ಲೂ ಉತ್ಸಾಹ ಸ್ವಲ್ಪ ಕಡಿಮೆಯಾಗಿದೆ. ಬಿಜೆಪಿ ಚುನಾವಣಾ ವಿಜಯೋತ್ಸವದಿಂದ ಜೆಡಿಎಸ್‌ಗೆ ಸ್ವಲ್ಪ ಉಸಿರು ಬಂದಂತಾಗಿದೆ. ಪಕ್ಷ ತೊರೆಯುತ್ತಿದ್ದವರಲ್ಲಿ ಕೆಲವರು ತಮ್ಮ ನಿರ್ಧಾರ ಬದಲಿಸಿ, ಪಕ್ಷದಲ್ಲಿಯೇ ಉಳಿಯುವರೆಂಬ ಭಾವನೆ ಈ ಪಕ್ಷದ ನಾಯಕರಲ್ಲಿ ಮೂಡಿದೆ.

# ಎಲೆಬೇತೂರಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

## ಸಿದ್ಧತಾ ಸಭೆ



ದಾವಣಗೆರೆ, ಮಾ. 11 - ಎಲೆಬೇತೂರು ಗ್ರಾಮದಲ್ಲಿ 11ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಈ ಭಾಗದ ಕನ್ನಡಿಗರ ಸೌಭಾಗ್ಯವಾಗಿದೆ. ಬಿ ವಾಮದೇವಪ್ಪ ಅವರು ಹಿಂದೆ ತಾಲೂಕು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಮ್ಮ ಗ್ರಾಮದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಮಾಡಲು ಕೇಳಿಕೊಂಡಿದ್ದೆವು. ಆದರೆ, ಆಗ ಆಗದಿದ್ದದ್ದು ಈಗ ನಮಗೆ ಜಿಲ್ಲಾ ಸಮ್ಮೇಳನ ಮಾಡುವ ಸೌಭಾಗ್ಯ ಒಲಿದುಬಂದಿದೆ ಎಂದು ಗ್ರಾಮದ ಮುಖಂಡ ಎಚ್. ಬಸವರಾಜಪ್ಪ ಅವರು ಸಂತೋಷ ವ್ಯಕ್ತಪಡಿಸಿದರು.

ಎಲೆಬೇತೂರಿನಲ್ಲಿ ನಿನ್ನೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವ ಸಿದ್ದತಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಗ್ರಾಮದ ಮುಖಂಡರುಗಳಾದ ನಾಗಪ್ಪ, ಬಿ. ಕರಿಬಸಪ್ಪ ಹಾಗೂ ಬಿ. ಜಿ. ಸಂಗನಗೌಡ್ರು ಮಾತನಾಡಿ, ಗ್ರಾಮಸ್ಥರು ಸಮ್ಮೇಳನವನ್ನು ಅದ್ಧೂರಿ ಮತ್ತು ಅರ್ಥಪೂರ್ಣವಾಗಿ ನೆರವೇರಿಸಿ ಕೊಡಲು ಉತ್ಸುಕರಾಗಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಮಾತನಾಡಿ, ತಾವು ಜಿಲ್ಲಾ ಅಧ್ಯಕ್ಷರಾದ ಮೇಲೆ ಮೊದಲನೇ ಜಿಲ್ಲಾ ಸಮ್ಮೇಳನ ಇದಾಗಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿದ್ದು, ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ಮಹಿಳೆಗೆ ನೀಡಿರುವುದು ಔಚಿತ್ಯ ಪೂರ್ಣವಾಗಿದೆ ಎಂದರು. ಪ್ರತಿವರ್ಷ ದಾವಣಗೆರೆ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಜಿಲ್ಲಾ ಸಮ್ಮೇಳನವನ್ನು ಆಯೋಜಿಸಿ ಆ ಮೂಲಕ ಕನ್ನಡ ಕಟ್ಟುವ ಕೆಲಸವನ್ನು ಜಿಲ್ಲೆಯಾದ್ಯಂತ ಯಶಸ್ವಿಯಾಗಿ ನೆರವೇರಿಸುತ್ತೇನೆ ಎಂದು ಹೇಳಿದರು.

ಸಭೆಯಲ್ಲಿ ಭಾಗವಹಿಸಿದ್ದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ ಅವರು ಸಮ್ಮೇಳನದ ರೂಪುರೇಷೆಯನ್ನು ಗ್ರಾಮಸ್ಥರಿಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ ದಿಳ್ಯೆಪ್ಪ ಭಾಗವಹಿಸಿದ್ದರು. ಹಾಗೂ ಬೇತೂರು ಗ್ರಾಮದ ಎಂ. ನಾಗಪ್ಪ ಎಚ್. ಬಸವರಾಜಪ್ಪ, ಎಂ.ಬಸವರಾಜಪ್ಪ, ಎಂ. ಪತ್ರಿಬಸಪ್ಪ, ಬಿ.ಪ್ರಭು, ಬಿ.ಜಿ. ಸಂಗನ ಗೌಡ್ರು, ಬಿ. ವಿರೂಪಾಕ್ಷಪ್ಪ, ಬಿ.ಕರಿಬಸಪ್ಪ, ಬಿ.ರಾಜಪ್ಪ, ಬಿ.ಎಂ. ಬಸವರಾಜಯ್ಯ, ಎಂ.ಎಸ್. ಮಂಜುನಾಥ್, ಎ.ಕೆ. ಮಂಜಪ್ಪ, ಗೌಡ್ರು ಗುರುಮೂರ್ತಿ, ಬಿ.ಶಿವಕುಮಾರ್, ಬಿ. ಕಲ್ಪನಹಳ್ಳಿ ಬಸವಲಿಂಗಪ್ಪ, ನಾಗರಾಜ್ ಮತ್ತು ಇತರರು ಸಲಹೆ - ಸಹಕಾರ ನೀಡಿದರು.

# 39ನೇ ವಾರ್ಡ್ : ಕಾಮಗಾರಿಗಳ ವೀಕ್ಷಣೆ



ದಾವಣಗೆರೆ, ಮಾ.11- 39ನೇ ವಾರ್ಡಿನ ವಿದ್ಯಾನಗರದ 5ನೇ ಕ್ರಾಸ್‌ನಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಹಾಗೂ ಪಾಲಿಕೆ ಸದಸ್ಯರಾದ ಶ್ರೀಮತಿ ಗೀತಾ ದಿಳ್ಯೆಪ್ಪ ಅವರುಗಳು ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಅಧೀಕ್ಷಕ ಅಭಿಯಂತರ ಮಂಜುನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರ ಅನುಪ್, ಸಹಾಯಕ ಅಭಿಯಂತರರಾದ ಜಯಲಕ್ಷ್ಮಿ, ಬಿಜೆಪಿ ಮುಖಂಡರಾದ ವಿನಯ್ ದಿಳ್ಯೆಪ್ಪ, ಸಿದ್ದೇಶ್, ಪಿ.ಎಂ.ಸಿ. ಕಾರ್ತಿಕ್, ಅರುಣ್ ನಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

# ನರಗನಹಳ್ಳಿಯಲ್ಲಿ ಇಂದಿನಿಂದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿ

ದಾವಣಗೆರೆ, ಮಾ.11- ಶ್ರೀ ವೀರಾಂಜನೇಯ ಸ್ವಾಮಿ ಸ್ಪೋರ್ಟ್ಸ್ ಕ್ಲಬ್ ಹಾಗೂ ಕಿಚ್ಚನ ಹುಡುಗರು ವತಿಯಿಂದ ಎರಡನೇ ಬಾರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯನ್ನು ನರಗನಹಳ್ಳಿಯಲ್ಲಿ ನಾಳೆ ದಿನಾಂಕ 12ರಿಂದ ಮೂರು ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಗ್ರಾಮದ ಯುವಕ ಮೋಹನ್, 12 ಸಾವಿರ ರೂ. ಪ್ರಥಮ ಬಹುಮಾನ, 6 ಸಾವಿರ ರೂ. ದ್ವಿತೀಯ ಹಾಗೂ 3 ಸಾವಿರ ರೂ. ತೃತೀಯ ಬಹುಮಾನ ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು ಎಂದರು.

ನಾಳೆ ದಿನಾಂಕ 12ರ ಶನಿವಾರ ಬೆಳಿಗ್ಗೆ 10.05ಕ್ಕೆ ಜಿ.ಎಸ್. ಶ್ಯಾಮ್ ಹಾಗೂ ನೆಶ್ವಿ ಎನ್.ಬಿ. ನಾಗರಾಜ್ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ನರಗನಹಳ್ಳಿಯ ನೆಶ್ವಿ ಶಾಂತಪ್ಪ, ಚಿನ್ನಪ್ಪ, ಎನ್.ಆರ್. ತಿಪ್ಪೇಸ್ವಾಮಿ, ಎಂ.ಬಿ. ಬಸವಂತಪ್ಪ, ಕಲ್ಲಪ್ಪ, ಎಂ. ಎಸ್. ಗುರುಮೂರ್ತೆಪ್ಪ, ಚೋಟಪ್ಪರ ಜಯಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಡಾಕ್ಟರೇಟ್ ಪಡೆದ ಬಿ.ಟಿ. ಸಿದ್ದಪ್ಪ ಅವರನ್ನು ಪಂದ್ಯಾವಳಿಯ ಕೊನೆಯ ದಿನ ಸನ್ಮಾನಿಸಲಾಗುತ್ತದೆ ಎಂದು ತಿಳಿಸಿದರು. ಮಾರುತಿ, ಯಶವಂತ್, ರುದ್ರೇಶ್, ಚೇತನ್, ದರ್ಶನ್ ಪತ್ರಿಕಾಗೋಷ್ಠಿಯಲ್ಲಿದ್ದರು.


# ಪಂಜಾಬ್‌ನಲ್ಲಿ ಆಮ್ ಆದ್ಮಿ ಗೆಲುವು : ಜಿಲ್ಲಾ ಸಮಿತಿ ಸಂತಸ

ದಾವಣಗೆರೆ, ಮಾ.11- ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ ಪ್ರಚಂಡ ಬಹುಮತ ಪಡೆದು ಜನಸಾಮಾನ್ಯರ ಪಕ್ಷವಾಗಿ ಹೊರ ಹೊಮ್ಮಿರುವುದಕ್ಕೆ ಪಕ್ಷದ ಜಿಲ್ಲಾ ಸಮಿತಿ ಸಂತಸ ವ್ಯಕ್ತಪಡಿಸಿದೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸಂತಸ ಹಂಚಿಕೊಂಡ ಸಮಿತಿಯ ಜಿಲ್ಲಾಧ್ಯಕ್ಷ ಕೆ.ಎಲ್. ರಾಘವೇಂದ್ರ, ಜನ ಸಾಮಾನ್ಯರಿಗೆ ಅನುಕೂಲ ವಾಗುವಂತಹ ಯೋಜನೆಗಳಾದ ಉಚಿತ ಶಿಕ್ಷಣ, ಆರೋಗ್ಯ, ನಿರುದ್ಯೋಗ ನಿವಾರಣೆ ಮುಂತಾದ ಕ್ರಮಗಳ ಹಿನ್ನೆಲೆಯಲ್ಲಿ ಜನರು ಪಕ್ಷಕ್ಕೆ ಮತ ನೀಡಿ ಗೆಲ್ಲಿಸಿದ್ದಾರೆ. ಮುಂಬರುವ ದಿನಗಳಲ್ಲಿ ಎಲ್ಲಾ ರಾಜ್ಯಗಳಲ್ಲೂ ಪಕ್ಷ ಭಾಗವಹಿಸಿ ಗೆಲವು ಸಾಧಿಸುವ ವಿಶ್ವಾಸವಿದೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ 3 ಸಾವಿರ ಸದಸ್ಯರಿದ್ದು, ಸದಸ್ಯತ್ವ ಹೆಚ್ಚಿಸುವ ಆಂದೋಲನ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾರ್ಯದರ್ಶಿ ರವೀಂದ್ರ, ಸಮೀರ್ ಹಸನ್, ಆದಿಲ್ ಖಾನ್ ಉಪಸ್ಥಿತರಿದ್ದರು.





## ಟಗರಿನ ಕಾಳಗದಲ್ಲಿ ಎಸ್ಸೆಸ್ಸೆಂ

ನಗರ ದೇವತೆ ಶ್ರೀ ದುಗ್ಗಮ್ಮನ ಜಾತ್ರೆ ಪ್ರಯುಕ್ತ ಶುಕ್ರವಾರ ಏರ್ಪಾಡಾಗಿದ್ದ ಟಗರಿನ ಕಾಳಗ ಸಂದರ್ಭದಲ್ಲಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್ ಮತ್ತಿತರರು ಆಗಮಿಸಿ ವೀಕ್ಷಿಸಿದರು.

# ಬಹುಮುಖ ಪ್ರತಿಭೆ 'ಜೆಪಿ' ಪಾದಯಾತ್ರೆಗೆ 20 ವರ್ಷ

'ವಿಚಾರವಂತ ಪದವೀಧರ' ಪ್ರಜಾಪ್ರಭುತ್ವದ ಆಧಾರ, ಈ ಘೋಷವಾಕ್ಯದೊಂದಿಗೆ 'ಜೆಪಿ' ಎಂದೇ ಹೆಸರಾಗಿರುವ ಜಯಪ್ರಕಾಶ್ ಕೊಂಡಜ್ಜಿ ತನ್ನ ಗೆಳೆಯರೊಂದಿಗೆ ಸೇರಿ ದಾವಣಗೆರೆಯಿಂದ ಬೆಂಗಳೂರಿಗೆ ಸುಮಾರು 300 ಕಿ.ಮೀ. ಪಾದಯಾತ್ರೆ ಮಾಡಿ, ಇಂದಿಗೆ ಬರೋಬ್ಬರಿ 20 ವರ್ಷಗಳು ಕಳೆಯುತ್ತವೆ.



**ನಗರದಲ್ಲಿ ಇಂದು ಮತ್ತೆ ಪಾದ ಯಾತ್ರೆಯ ಮೂಲಕವೇ ಮರುಚಿಂತನೆಗೆ ಚಾಲನೆ ನೀಡುವ ಆಶಯ**

ಅದರ ಸವಿ ನೆನಪಿಗಾಗಿ, ಇಂದು ಬೆಳಿಗ್ಗೆ 10 ಗಂಟೆಗೆ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಿಂದ, ಜಿಲ್ಲಾ ಬಿಜೆಪಿ ಕಚೇರಿಗೆ ಪಾದಯಾತ್ರೆಯ ಮೂಲಕವೇ ತೆರಳಿ ಅಂದಿನ ಪಾದಯಾತ್ರೆಯ ಧ್ಯೇಯೋದ್ದೇಶಗಳ ಮರುಚಿಂತನೆಗೆ ಮತ್ತೆ ಚಾಲನೆ ನೀಡುವ ಆಶಯ ಹೊಂದಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ಸಂಘಟನೆ, ಸಮಾಜವಾದಿ ಚಳುವಳಿಗಳ ಮೂಲಕ ಗುರುತಿಸಿಕೊಂಡು ಬಂದ ಜೆ.ಪಿ., ವಾಜಪೇಯಿ, ಮೋದಿಯವರ ಕಾರ್ಯಕ್ರಮಗಳಿಗೆ ಆಕರ್ಷಿತರಾಗಿ ಬಿಜೆಪಿ ಪಕ್ಷಕ್ಕೆ ಸೇರಿ, ಜಿಲ್ಲಾ ಬಿ.ಜೆ.ಪಿ. ವಕ್ತಾರರಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಇವರಿಗೆ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಸೇರಿದಂತೆ ಹಲವಾರು ಹಿರಿಯರು ಪ್ರೋತ್ಸಾಹ ನೀಡಿದ್ದಾರೆ. ಜೆ.ಪಿ. ಜಿಲ್ಲಾ ಬಿ.ಜೆ.ಪಿ. ವಕ್ತಾರರಾಗಿ ಪರಿಣಾಮ ಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಕುವೆಂಪು ವಿವಿ ಹಾಗೂ ದಾವಣಗೆರೆ ವಿ.ವಿ. ಸಿಂಡಿಕೇಟ್ ಸದಸ್ಯರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿರುವ ಜೆಪಿ ಶಿಕ್ಷಣ ತಜ್ಞರು, ಬುದ್ಧಿಜೀವಿಗಳು. ಮುಖ್ಯವಾಗಿ ನಿರುದ್ಯೋಗಿ ಪದವೀಧರರೊಂದಿಗೆ ಸಮಾಲೋಚಿಸಿ ಶಿಕ್ಷಣ ಮತ್ತು ಉದ್ಯೋಗ ಕುರಿತಂತೆ ಕರಡು ಪ್ರತಿಯನ್ನು ಪಾದಯಾತ್ರೆ ಮುಖಾಂತರ ತೆರಳಿ ಸರ್ಕಾರಕ್ಕೆ ಸಲ್ಲಿಸಿ ಗಮನ ಸೆಳೆದಿದ್ದಾರೆ.

ಸ್ವತಃ ಬಾಸ್ಕೆಟ್ ಬಾಲ್, ಖೋ ಖೋ, ಕಬಡ್ಡಿ ಮತ್ತು ಅಥ್ಲೆಟಿಕ್ಸ್ ಪಟುವಾಗಿ ಮೇಲುಗೈ ಸಾಧಿಸುತ್ತಿದ್ದ ಜೆ.ಪಿ. ಜಿಲ್ಲಾ ಹಾಗೂ ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಬಾಚಿದ್ದಾರೆ. ಅಲ್ಲದೇ ಡಬಲ್ ಸ್ಪೋರ್ಟ್ಸ್ ಕ್ಲಬ್, ಗ್ರೀನ್ಸ್ ಕ್ಲಬ್ ಸೇರಿ ಅನೇಕ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ

ಸೇವಾ ಸಂಸ್ಥೆ ಲಿಯೋ ಕ್ಲಬ್ ಸಂಸ್ಥಾಪಕ ಅಧ್ಯಕ್ಷರಾಗಿ ಹಲವಾರು ಉಚಿತ ನೇತ್ರ ಶಿಬಿರಗಳನ್ನು ಆರೋಗ್ಯ ಶಿಬಿರಗಳನ್ನು ಆಯೋಜಿಸಿದ ಕಾರಣವಾಗಿ ಅವರು ಮುಂದೆ ಸಂಪೂರ್ಣ ಲಿಯೋ ಕ್ಲಬ್ 324 -ಡಿ4 ಜಿಲ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ ಒದಗಿ ಬರುತ್ತದೆ.

ಚೆನ್ನಾಗಿ ಹಾಡಲು ಬಲ್ಲ ಜೆಪಿ, ಮೊದಲಿನಿಂದಲೂ ಸಂಗೀತ, ಸಾಹಿತ್ಯಿಕ, ಚಟುವಟಿಕೆಗಳಲ್ಲಿ ಕ್ರಿಯಾಶೀಲತೆ ಮೆರೆದವರು. ಹಲವಾರು ನಾಟಕಗಳಲ್ಲಿ ಅಭಿನಯಿಸಿ, ಸಂಘಟಕರಾಗಿಯೂ ದುಡಿದಿದ್ದಾರೆ. 35 ವರ್ಷಗಳ ಹಿಂದೆ ಗೆಳೆಯರೊಂದಿಗೆ ಬಿಐಇಟಿ ಕಾಲೇಜಿನಲ್ಲಿ ಆರಂಭಿಸಿದ ಸಾಂಸ್ಕೃತಿಕ ಉತ್ಸವ 'ದವನ' ಎಂಬ ಸಾಂಸ್ಕೃತಿಕ ಉತ್ಸವ ಇಂದಿಗೂ ನಡೆಯುತ್ತಿದೆ. ಅಭಿಯಂತ ರಂಗ, ಪ್ರತಿಮಾ ಸಭಾ ಮುಂತಾದ ಸಂಘಟನೆಗಳಲ್ಲಿ ಈಗಲೂ ಸಕ್ರಿಯರಾಗಿದ್ದಾರೆ.

# ದಲಿತ ಸಂಘರ್ಷ ಸಮಿತಿ, ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿಯ ಸಮ್ಮಿಲನ

**ಹರಿಹರದಲ್ಲಿ ಇಂದು - ನಾಳೆ**

ದಾವಣಗೆರೆ, ಮಾ. 11 - ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿಯ ಸಮ್ಮಿಲನ ಸಮಾವೇಶವನ್ನು ನಾಳೆ ದಿನಾಂಕ 12 ಹಾಗೂ 13 ರಂದು ಹರಿಹರದಲ್ಲಿ ಸ್ವಾಭಿಮಾನಿ ನಾಯಕ ಪ್ರೊ. ಬಿ. ಕೃಷ್ಣಪ್ಪ ಅವರ ಚೈತ್ಯಭೂಮಿಯಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಕಬ್ಬಳ್ಳಿ ಮೈಲಪ್ಪ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ನಾಳೆ ದಿನಾಂಕ 12 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ದಿನಾಂಕ 13 ರ ಭಾನುವಾರ ಮಧ್ಯಾಹ್ನ 3ಗಂಟೆಗೆ ಅಂಬೇಡ್ಕರ್ ಅವರು ತಾತ್ವಿಕ-ಸೈದ್ಧಾಂತಿಕ ಹೋರಾಟ ಮತ್ತು ರಾಜಕಾರಣ ಚರ್ಚಾ ಮತ್ತು ನಿರ್ಣಯ ಕೈಗೊಳ್ಳಲಾಗುವುದು. ರಾತ್ರಿ 8-30ಕ್ಕೆ ಜಂಟಿ ರಾಜ್ಯ ಕಾರ್ಯಕಾರಣಿ ಸಭೆ ಹಮ್ಮಿಕೊಳ್ಳಲಾಗುವುದು ಎಂದರು.

ಡಿ.ಎಸ್- 4 ಕರ್ನಾಟಕದ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಕದಸಂಸ ರಾಜ್ಯ ಸಂಚಾಲಕ ಎಂ. ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯ ಸಂಪನ್ಮೂಲ ಕೇಂದ್ರದ ಮಾಜಿ ನಿರ್ದೇಶಕ ಡಾ. ತುಕಾರಾಂ ಪ್ರಧಾನ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಂ. ದೇವದಾಸ್, ವಿ. ನಾರಾಯಣ ಸ್ವಾಮಿ, ಕೃಷ್ಣಪ್ಪ ಬೆಲ್ಲದ ಮಾಡು, ಹೆಗ್ಗೆರೆ ರಂಗಪ್ಪ ಉಪಸ್ಥಿತರಿರುವವರು.

ಭಾಗ್ಯಮ್ಮ ನಾರಾಯಣ ಸ್ವಾಮಿ, ಕವಾಲಿ ವೆಂಕಟರಮಣಪ್ಪ, ರಾಜಕುಮಾರ್ ಮೂಲಭಾರತಿ, ಪಿ.ಎಂ. ಕೃಷ್ಣಪ್ಪ , ಕಬ್ಬಳ್ಳಿ ಭೈರಪ್ಪ ಇನ್ನಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದವರು ಹೇಳಿದರು.

ಸಮಾರೋಪ ಭಾಷಣವನ್ನು ವೆಂಕಟಗಿರಿಯಯ್ಯ ಮಾಡಲಿದ್ದು, ಎಂ. ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಮ್ಮಿಲನ ಸಮಾವೇಶ ದಲಿತ ಸಂಘಟನೆಗೆ ದೊಡ್ಡ ಶಕ್ತಿ ನೀಡಲಿದೆ. ಡಿ.ಎಸ್-4 ಕರ್ನಾಟಕ ಪ್ರಧಾನ ಕಾರ್ಯದರ್ಶಿ ಹೆಗ್ಗೆರೆ ರಂಗಪ್ಪ ತಿಳಿಸಿದರು.

ಹೂವಿನಮಡು ಅಂಜಿನಪ್ಪ, ಸಂತೋಷ ಎನ್. ನೋಟದವರ್, ಶಾಂತರಾಜು ಹಾರೋಹಳ್ಳಿ, ಗುಮ್ಮನೂರು ರಾಮಚಂದ್ರಪ್ಪ, ಸತೀಶ್ ಮಲೇಮಾಚಿಕೆರೆ, ರಾಜನಹಳ್ಳಿ ಮಂಜುನಾಥ್, ಅಳಗವಾಡಿ ನಿಂಗರಾಜ್, ಗಾಂಧಿನಗರ ರಾಜು, ಕೈದಾಳೆ ಮಂಜುನಾಥ್, ನಾಗನೂರು ರಾಜು, ಬೆಳವನೂರು ದೇವೇಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಶ್ರೀ ಶಿವಕುಮಾರ ಸ್ವಾಮೀಜಿ ಉದ್ಯಾನವನ ಅಭಿವೃದ್ಧಿಗೆ ಸಂಸದರಿಗೆ ಮನವಿ



ದಾವಣಗೆರೆ, ಮಾ.11 - ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನ ರೈಲ್ವೇ ಟ್ರ್ಯಾಕ್ ಪಕ್ಕದ ಶ್ರೀ ಶಿವಕುಮಾರ ಸ್ವಾಮೀಜಿ ಉದ್ಯಾನವನವನ್ನು ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಿಕೊಡಬೇಕೆಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರಿಗೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಈ ಸಂಬಂಧ ತತ್‌ಕ್ಷಣವೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸ್ಥಳದಲ್ಲೇ ಉಪಸ್ಥಿತರಿದ್ದ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಅವರಿಗೆ ಸಂಸದರು ನಿರ್ದೇಶಿಸಿದರು. ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಉಪಸ್ಥಿತರಿದ್ದರು.

ನಾಗರಿಕ ಹಿತಕ್ಷಣಾ ಸಮಿತಿಯ ಗೌರವ ಅಧ್ಯಕ್ಷರೂ ಆದ ಜಿಲ್ಲಾ ಗಾಣಿಗ ಸಮಾಜದ ಮುಖಂಡ ಕೆ.ಎಸ್. ಮಲ್ಲೇಶಪ್ಪ, ಉಪಾಧ್ಯಕ್ಷರೂ, ವಕೀಲರೂ ಆದ ಶ್ರೀಮತಿ ವಸುಂದರಾ, ಸಮಾಜ ಸೇವಕರಾದ ಕೆ.ಎಂ. ವೀರಯ್ಯ ಸ್ವಾಮಿ, ಸ್ನೇಹ ಜೀವಿ ಸೇವಾ ಟ್ರಸ್ಟ್‌ನ ಶ್ರೀಧರ್ ಘೋರ್ಪಡೆ, ದೇವ ನಗರಿ ಸೇವಾ ಟ್ರಸ್ಟ್ ಕಾರ್ಯದರ್ಶಿ ಇ.ಎಂ. ಬಾಬು, ವಿರೂಪಾಕ್ಷಣ್ಣ, ರಾಕೇಶ್ ಹಾಗೂ ಇತರರು ಇದ್ದರು.

## ಸಂಸದರ ಪ್ರವಾಸ

ಹರಿಹರ ಕ್ಷೇತ್ರದ ಬನ್ನಿಕೋಡು, ಬೆಳ್ಳೂಡಿ, ಹೊಳೆಸಿರಿಗೆರೆ ಕ್ರಾಸ್, ಭಾನುವಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮಗಳು ಇಂದು ನಡೆಯಲಿದ್ದು, ಸಂಸದ ಡಾ. ಜಿ.ಎಂ.ಸಿದ್ದೇಶ್ವರ ಅವರು ಭಾಗವಹಿಸಲಿದ್ದಾರೆ.

# ಕ್ಷೇತ್ರಕ್ಕೆ ಹೆಚ್ಚು ಅನುದಾನ ತಂದ ಶಾಸಕರು

**(1ನೇ ಪುಟದಿಂದ)** ಗ್ರಾಮಗಳಲ್ಲಿ 10 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಮತ್ತು 1.40 ಕೋಟಿ ರೂ. ವೆಚ್ಚದ ಸ್ಮಶಾನ ಅಭಿವೃದ್ದಿ ಕಾಮಗಾರಿಗಳಿಗೆ ಶಂಕು ಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಸ್ಮಶಾನವಿಲ್ಲದೆ ಅಂತ್ಯಸಂಸ್ಕಾರ ನಡೆಸಲು ಪರದಾಡಬೇಕಿತ್ತು. ಸರ್ಕಾರ ವಿಶೇಷ ವಾಗಿ ಸ್ಮಶಾನ ಅಭಿವೃದ್ದಿಗೆ ಮೊದಲ ಪ್ರಾಶಸ್ತ್ಯ ನೀಡಿ ಮೊದಲ ಹಂತದಲ್ಲಿ ತಾಲ್ಲೂಕಿನ 10 ಗ್ರಾಮಗಳಿಗೆ ಕಾಂಪೌಂಡ್, ಬೋರ್ ವೆಲ್, ಚಿತಾ ಗಾರ ಸೇರಿದಂತೆ ಮೂಲ ಸೌಕರ್ಯ ಗಳುಳ್ಳ ಸ್ಮಶಾನಗಳನ್ನು ನಿರ್ಮಿಸಲಾಗುವುದು ಎಂದರು.

ಪಂಚಾಯತ್ ರಾಜ್ ಇಂಜಿನಿಯ ರಿಂಗ್ ಇಲಾಖೆಯಿಂದ ತುಪ್ಪದಹಳ್ಳಿ ಅಸಗೋಡು ಗ್ರಾಮಗಳಲ್ಲಿ 2.40 ಕೋಟಿ ರೂ., ಪಲ್ಲಾಗಟ್ಟೆ ಗ್ರಾಮ 2 ಕೋಟಿ ರೂ., ಗುರುಸಿದ್ದಾಪುರ 1.50 ಕೋಟಿ ರೂ., ಯರ್ಲಕಟ್ಟೆ 1.80 ಕೋಟಿ ರೂ., ಬಸವನಕೋಟೆ 1.50 ಕೋಟಿ ರೂ., ಅಗಸನಹಳ್ಳಿ 1 ಕೋಟಿ ರೂ. ವೆಚ್ಚ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಸಿಸಿರಸ್ತೆ ಮತ್ತು ಡಾಂಬರೀಕರಣ ರಸ್ತೆಗಳಿಗೆ ಅಭಿವೃದ್ದಿ ಕಾಮಗಾರಿಗಳಿಗೆ ಇಂದು ಚಾಲನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿದರು. ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ ಮಹೇಶ್, ಜಿ.ಪಂ ಎಇಇ ಬಿ.ಪುಟ್ಟಸ್ವಾಮಿ, ಎಇ ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಲೊಕೋಪಯೋಗಿ ಇಲಾಖೆ ಎಇಇ ರುದ್ರಪ್ಪ, ಸಹಾಯಕ ಇಂಜಿನಿಯರ್ ಗಳಾದ ನಾಗರಾಜ್, ಪ್ರಭುದೇವ್ , ಗ್ರಾ.ಪಂ ಅಧ್ಯಕ್ಷೆ ವೀರಮ್ಮ ಮುಂತಾದದವರು ಇದ್ದರು.

# 17 ರಂದು ದೊಡ್ಡಬಾತಿ ಶ್ರೀ ರೇವಣಸಿದ್ಧೇಶ್ವರ ಸ್ವಾಮಿ ರಥ

## ಇಂದಿನಿಂದ ಧಾರ್ಮಿಕ ಕಾರ್ಯಕ್ರಮಗಳು

ದಾವಣಗೆರೆ, ಮಾ. 11- ದೊಡ್ಡಬಾತಿ ಗ್ರಾಮದಲ್ಲಿ ಇದೇ ದಿನಾಂಕ 17 ರಂದು ಶ್ರೀ ರೇವಣಸಿದ್ಧೇಶ್ವರ ಸ್ವಾಮಿಯ ಮಹಾ ರಥೋತ್ಸವ ಜರುಗಲಿದ್ದು, ಪ್ರಯುಕ್ತ ನಾಡಿದ್ದು ದಿನಾಂಕ 13 ರಿಂದ 18 ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ನಾಳೆ ಭಾನುವಾರ ಗೌಡ್ರ ಮನೆತನದವರಿಂದ ಬೆಟ್ಟದ ಮೇಲಿರುವ ಶ್ರೀ ಸ್ವಾಮಿಗೆ ಕಂಕಣಧಾರಣೆ ಮತ್ತು ಅರಿಶಿಣ ಎಣ್ಣೆ ಕಾರ್ಯ ನಡೆಯಲಿದೆ.


14 ರಂದು ರಾತ್ರಿ ಪಾಲ್ದಾರ ಗೌಡ್ರು ಕನ್ನಪ್ಪಳ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ ಮತ್ತು ಉಚ್ಛಾಯ ಕಾರ್ಯ ನಡೆಯಲಿದೆ.

15 ರಂದು ರಾತ್ರಿ ಬಣಕಾರ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ, ಉಚ್ಛಾಯ, 16 ರಂದು ಆವರಗೊಳ್ಳ ಶ್ರೀ ವೀರಭದ್ರೇಶ್ವರ ಸ್ವಾಮಿಯು ದೊಡ್ಡಬಾತಿಗೆ ಆಗಮಿಸಲಿದ್ದು, ಸಕಲ ಬಿರುದಾವಳಿಗಳಿಂದ ದೇವಸ್ಥಾನಕ್ಕೆ ಕರೆ ತರಲಾಗುವುದು. ರಾತ್ರಿ ಪತ್ತಾರ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ ಸೇವೆ ನಡೆಯಲಿದೆ.

# 'ತನಿಷ್ಕ' ದಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 11- ನಗರದ ತನಿಷ್ಕ ಶೋ ರೂಂನಲ್ಲಿ ಮಹಿಳಾ ದಿನವನ್ನು ಆಚರಿಸಲಾಯಿತು. ಮಹಿಳಾ ಪೊಲೀಸ್ ಠಾಣೆಯ ಸಿಪಿಐ ಶಿಲ್ಪಾ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಸುಕನ್ಯಾ, ಅಮೃತಾ, ಅಂಜಲಿ ಹಾಗೂ ಶೋ ರೂಂ ಸಿಬ್ಬಂದಿ ವರ್ಗದವರು ಹಾಜರಿದ್ದರು.



# ಶ್ಯಾಬನೂರಿನಲ್ಲಿ ಇಂದು ಆಂಜನೇಯ ಸ್ವಾಮಿ ತೇರು

ದಾವಣಗೆರೆ ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಇಂದು ರಾತ್ರಿ 12 ಗಂಟೆಗೆ ಜರುಗಲಿದೆ.

ನಾಳೆ ಭಾನುವಾರ ಮಧ್ಯಾಹ್ನ 2 ಗಂಟೆಗೆ ಬೆಲ್ಲದ ಬಂಡಿ ಉತ್ಸವ ಮತ್ತು ಶ್ಯಾಬನೂರು ಸ್ವಾಮಿ, ನಾಗನೂರು ಸ್ವಾಮಿ ಶಿರಮಗೊಂಡನಹಳ್ಳಿ ಮತ್ತು ನಿಟುವಳ್ಳಿ ಗ್ರಾಮಗಳಿಗೆ ಸಂಚಾರ ಏರ್ಪಾಡಾಗಿದೆ. ದಿನಾಂಕ 14ರ ಸೋಮವಾರ ಓಕುಳಿ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ. ರಾತ್ರಿ 9.30ಕ್ಕೆ ಶ್ರೀ ಮಾರುತಿ ನಾಟ್ಯ ಕಲಾ ಸಂಘದಿಂದ ಬಸವೇಶ್ವರ ರಂಗ ಮಂದಿರದಲ್ಲಿ 'ಕಲಿಯುಗದಲ್ಲಿ ಘರ್ಜಿಸಿದ ಕರ್ಣಾರ್ಜುನ' ನಾಟಕ ಪ್ರದರ್ಶನಗೊಳ್ಳಲಿದೆ.

# ಗುಮ್ಮನೂರಿನಲ್ಲಿ ಇಂದು ಜವಳ, ಉರುಳು ಸೇವೆ, ನಾಳೆ ರಥೋತ್ಸವ

ದಾವಣಗೆರೆ ತಾಲ್ಲೂಕಿನ ಗುಮ್ಮನೂರು ಗ್ರಾಮದಲ್ಲಿ ಶ್ರೀ ಗುರು ಚನ್ನಬಸವೇಶ್ವ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ರಾತ್ರಿ 9 ಗಂಟೆಗೆ ಜವಳ ಕಾರ್ಯ ಮತ್ತು ಉರುಳು ಸೇವೆ, ರಥದ ಚಕ್ರಕ್ಕೆ ಎಣ್ಣೆ ಮಜ್ಜನ ಸೇವೆ ನಡೆಯಲಿದೆ. ನಾಳೆ ಭಾನುವಾರ ಬೆಳಿಗ್ಗೆ 6 ಕ್ಕೆ ಸಕಲ ಬಿರುದಾವಳಿಯೊಂದಿಗೆ ಶ್ರೀ ಚನ್ನಬಸವೇಶ್ವರ ಸ್ವಾಮಿ ರಥೋತ್ಸವ ಜರುಗಲಿದೆ. ನಂತರ ಬೆಳ್ಳಿ ಪಲ್ಲಕ್ಕಿ ಉತ್ಸವ, ಬೆಳಿಗ್ಗೆ 10 ಗಂಟೆಗೆ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಂದು ರಾತ್ರಿ 10.30 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

## ಹಂಪನೂರಿನಲ್ಲಿ ನಾಳೆ ರಥೋತ್ಸವ

ಭರಮಸಾಗರ ಹೋಬಳಿ ಹಂಪನೂರು ಗ್ರಾಮದಲ್ಲಿ ನಾಳೆ ಭಾನುವಾರ ಪುನರ್ವಸು ನಕ್ಷತ್ರದ ವೇಳೆ ರಥೋತ್ಸವ ಜರುಗಲಿದೆ. ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ರಂಗನಾಥ ಸ್ವಾಮಿಯ ಆನೆ ಉತ್ಸವ, ನಾಳೆ ಭಾನುವಾರ ಬೆಳಗಿನ ಜಾವ 4 ಗಂಟೆಗೆ ಓಕುಳಿ, ನಂತರ ರಥೋತ್ಸವ ಜರುಗಲಿದೆ

# ಕಟ್ಟಿಗೆಹಳ್ಳಿಯಲ್ಲಿ ನಾಳೆ ಶ್ರೀ ಬಸವೇಶ್ವರ ಸ್ವಾಮಿ ತೇರು

ಜಗಳೂರು ತಾಲ್ಲೂಕು ಕಟ್ಟಿಗೆಹಳ್ಳಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ಕಾರ್ಯಕ್ರಮಗಳು ಇಂದಿನಿಂದ ಇದೇ ದಿನಾಂಕ 14 ರವರೆಗೆ ನಡೆಯಲಿವೆ.

ಇಂದು ಬೆಳಿಗ್ಗೆ 8 ರಿಂದ ಗಂಗಾಪೂಜೆ, 9 ಕ್ಕೆ ಬಸವ ಉತ್ಸವ, ಸಂಜೆ 5.30 ಕ್ಕೆ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ, ರಾತ್ರಿ 7.30 ಕ್ಕೆ ಕಟ್ಟಿಗೆಹಳ್ಳಿ ಗ್ರಾಮದ ಸತ್ಸಂಗದವರಿಂದ ಭಜನೆ ನಡೆಯಲಿದೆ. ದಿನಾಂಕ 13 ರ ಭಾನುವಾರ ಮಧ್ಯಾಹ್ನ ಬೆಲ್ಲದ ಬಂಡಿ ಉತ್ಸವ, ರಾತ್ರಿ 9.30 ಕ್ಕೆ ಮನೋರಂಜನ ಕಾರ್ಯಕ್ರಮ, ದಿನಾಂಕ 14 ರ ಸೋಮವಾರ ಬೆಳಿಗ್ಗೆ 8.30 ಕ್ಕೆ ಓಕುಳಿ ಮತ್ತು ಗಂಗಾಪೂಜೆ ನೆರವೇರಲಿದೆ.


## ಬಿಲ್ಡಿಂಗ್ ಬಾಡಿಗೆಗೆ ಇದೆ

ಕಾಳಿಕಾದೇವಿ ರಸ್ತೆ ಡೋರ್ ನಂ. 2/2, ಅಂಬರ್‌ಕರ್ ಪಂಪಣ್ಣ ಅಂಗಡಿ ಎದುರಿಗೆ ಮೊದಲನೇ ಮಹಡಿಯಲ್ಲಿ 240 ಚದರ ಅಡಿ ಜಾಗ, 2ನೇ ಮಹಡಿಯಲ್ಲಿ 240 ಚದರ ಅಡಿ ಜಾಗ, 3ನೇ ಮಹಡಿಯಲ್ಲಿ 240 ಚದರ ಅಡಿ ಜಾಗವಿರುವ ಬಿಲ್ಡಿಂಗ್ ಬಾಡಿಗೆಗೆ ಇದೆ.

ಆಸಕ್ತರು ಸಂಪರ್ಕಿಸಿ :

87226 05565, 74063 06282
93705 72842


# ನಾಯಕ ಸ್ಥಾನ ಉಳಿಕೆಯ ಸವಾಲು

**(1ನೇ ಪುಟದಿಂದ)** ಕಾಲಿಟ್ಟರೂ ದೊಡ್ಡ ಪರಿಣಾಮ ಬೀರುತ್ತಿದೆ. ದೆಹಲಿ ಹಾಗೂ ಪಂಜಾಬ್‌ಗಳಲ್ಲಿ ಕಾಂಗ್ರೆಸ್‌ಗೆ ಹಾನಿ ಮಾಡಿಯೇ ಆಮ್ ಆದ್ಮಿ ಪಾರ್ಟಿ ಬೆಳೆದಿದೆ. ಬೇರೆ ರಾಜ್ಯಗಳಲ್ಲಿ ಎ.ಎ.ಪಿ. ಕಾಲಿಟ್ಟರೂ ಕಾಂಗ್ರೆಸ್‌ಗೆ ಸವಾಲಿದೆ. ಗುಜರಾತ್ ಹಾಗೂ ಹಿಮಾಚಲಪ್ರದೇಶಗಳ ಮೇಲೆ ಎ.ಎ.ಪಿ. ಕಣ್ಣಿರಿಸಿದೆ ಎಂದು ಕುಮಾರ್ ಹೇಳಿದ್ದಾರೆ.

ಕೈಗೇನಾದರೂ ಪೆಟ್ಟಾದರೆ ನಾವು ಮೂಳೆ ತಜ್ಞರ ಬಳಿ ಹೋಗುತ್ತೇವೆ. ರೋಗ ಬಂದಾಗ ಪರಿಣಿತ ವೈದ್ಯರ ಬಳಿ ಹೋಗುತ್ತೇವೆ. ಆದರೆ, ರೋಗಿ ಐ.ಸಿ.ಯು.ಗೆ ಸೇರಿದರೆ ಎಲ್ಲಾ ರೀತಿಯ ಪರಿಣಿತರು ಬೇಕಾಗುತ್ತದೆ. ಕಾಂಗ್ರೆಸ್ ಪರಿಸ್ಥಿತಿಯೂ ಈಗ ಅದೇ ರೀತಿ ಆಗಿದೆ ಎಂದು ಕುಮಾರ್ ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಜೀವನ ಚರಿತ್ರೆ ಬರೆದಿರುವ ರಶೀದ್ ಕಿದ್ವಾಯಿ ಹೇಳಿಕೆ ನೀಡಿದ್ದು, ಮಧ್ಯ ಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸ್‌ಘಡಗಳಲ್ಲಿ ಎ.ಎ.ಪಿ. ಹೆಚ್ಚು ಪರಿಣಾಮ ಬೀರದು. ಆದರೆ, ಅಸಮಾಧಾನ ಹೊಂದಿರುವ ಕಾಂಗ್ರೆಸ್ಸಿಗರನ್ನು ಸೆಳೆಯಬಹುದು ಎಂದಿದ್ದಾರೆ.

ಪ್ರತಿಪಕ್ಷ ಸ್ಥಾನಕ್ಕೆ ಎ.ಎ.ಪಿ. ಹೊಸ ಆಯ್ಕೆಯಾಗಿ ಬೆಳೆಯುತ್ತಿದೆ. ಇದು ಕಾಂಗ್ರೆಸ್ ಅಸ್ತಿತ್ವದ ಬಿಕ್ಕಟ್ಟು ಹೆಚ್ಚಿಸಿದೆ ಎಂದು ಕಿದ್ವಾಯಿ ತಿಳಿಸಿದ್ದಾರೆ.

ಗೋವಾದಲ್ಲಿ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳದೇ ಏಕಾಂಗಿಯಾಗಿ ಸ್ಪರ್ಧಿಸಿತು. ಇದು ಪ್ರತಿಪಕ್ಷಗಳ ಮತಗಳು ಒಡೆಯಲು ಕಾರಣವಾಯಿತು ಎಂದು ಹೇಳಿರುವ ಕಾಂಗ್ರೆಸ್ಸೇತರ ಪ್ರತಿಪಕ್ಷದ ನಾಯಕರೊಬ್ಬರು, ಒಂದೋ ಕಾಂಗ್ರೆಸ್ ಸಂಘಟನಾತ್ಮಕವಾಗಿ ಬಲವಾಗಬೇಕು ಇಲ್ಲವೇ ಸಾಮರ್ಥ್ಯ ಇರುವ ಬೇರೆ ಪಕ್ಷಕ್ಕೆ ಬೆಂಬಲಿಬೇಕು ಎಂದಿದ್ದಾರೆ.



# ಉಮೇಶ್ ನಾಯ್ಕ ಅವರಿಗೆ ರಾಷ್ಟ್ರೀಯ ರತ್ನ ಪ್ರಶಸ್ತಿ

ದಾವಣಗೆರೆ, ಮಾ.11- ತಾಲ್ಲೂಕಿನ ಚಿನ್ನಸಮುದ್ರದ ಜನಪದ - ಸಂಗೀತ ಕಲಾವಿದರಾದ ಉಮೇಶ್ ನಾಯ್ಕ ಅವರು ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿಯು ವಿವಿಧ ಕ್ಷೇತ್ರಗಳ ಸಾಧಕರಿಗೆ ಕೊಡಮಾಡುವ ರಾಷ್ಟ್ರೀಯ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸರ್ಕಾರಿ ನೌಕರರ ಭವನದ ಮಿನಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿರುವ ಸಾಂಸ್ಕೃತಿಕೋತ್ಸವ ಕಾರ್ಯಕ್ರಮದಲ್ಲಿ ಉಮೇಶ್ ನಾಯ್ಕ ಸೇರಿದಂತೆ, ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಡಾ. ಶಿವಾನಂದ ದಳವಾಯಿ, ಡಾ. ಎನ್. ಸುಲೋಚನಮ್ಮ, ಡಾ. ಅಂಜಿನಪ್ಪ ಡಿ. ಅವರುಗಳಿಗೆ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಗುವುದು.


## ಹೃದಯಪೂರ್ವಕ ಅಭಿನಂದನೆಗಳು



**ಡಾ|| ಸಚಿನ್ ಕೆ.ಓ.** B.E., M.Tech, Ph.D

ಇವರು ಮಂಡಿಸಿರುವ (ಇನ್ಪುಎನ್ಸ್ ಆಫ್ ಫಿಲ್ಲರ್ ಮೆಟಿರಿಯಲ್ಸ್ ಆನ್ ನ್ಯಾಚುರಲ್ ಫೈಬರ್ ರೀ ಎನ್ ಪೋರ್ಸ್ಡ್ ಪಾಲಿಮರ್ ಕಾಂಪೋಸಿಟ್) ಎಂಬ ಮಹಾಪ್ರಬಂಧಕ್ಕೆ ದಿನಾಂಕ 10.03.2022ರಂದು ಬೆಳಗಾವಿ ಸರ್ ಎಂ. ವಿಶೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

**ಶುಭ ಕೋರುವವರು:**

- ♦ ಶ್ರೀ ಕುಬೇರಪ್ಪ, ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷರು, ದಾವಣಗೆರೆ
- ♦ ಶ್ರೀಮತಿ ಸುಜಾತ ಕುಬೇರಪ್ಪ
- ♦ ಶ್ರೀಮತಿ ಸುಮಿತ್ರ ಕೆ.ಹೆಚ್ ಓಬಳಪ್ಪ
- ♦ ಶ್ರೀ ಲಿಂಗೇಶ್, ನಿವೃತ್ತ ಮುಖ್ಯ ಇಂಜಿನಿಯರ್ ಕೆ.ಪಿ.ಟಿ.ಸಿ.ಎಲ್, ಬೆಂಗಳೂರು
- ♦ ಶ್ರೀಮತಿ ಗೀತಾ ಲಿಂಗೇಶ್
- ♦ ಶ್ರೀ ರುದ್ರಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನೀರಾವರಿ ಇಲಾಖೆ
- ♦ ಶ್ರೀಮತಿ ಶ್ರೀದೇವಿ ರುದ್ರಪ್ಪ
- ♦ ಡಾ।। ಸುಮಂತ್ ಅಮೃತವರ್ಷಿಣಿ, ಬೆಂಗಳೂರು
- ♦ ಅಮೂಲ್ಯ, ಮನೋಜ್, ಹಾಗೂ ಶ್ರೇಯಸ್
- ♦ ಚೇತನ್, ಅನೂಪ್, ಅಪೂರ್ವ







## ಎಸ್.ಎಸ್.ಕೇರ್ ಟ್ರಸ್ಟ್

ನಮ್ಮ ನಡೆ ಆರೋಗ್ಯದೆಡೆ

ಕಿಡ್ನಿ ಕಾಯಿಲೆಗಳನ್ನು ತಡೆಗಟ್ಟಿ!



## ಈ ವಿಶ್ವ ಕಿಡ್ನಿ ದಿನದಂದು,

ದಾವಣಗೆರೆಯ ಜೆ.ಜೆ.ಎಂ ಮೆಡಿಕಲ್ ಕಾಲೇಜಿನಲ್ಲಿ ಕಿಡ್ನಿ ಚಿಕಿತ್ಸೆ ಹಾಗೂ ಡಯಾಲಿಸಿಸ್ ಘಟಕವನ್ನು ಹೊಂದಿರುವ ಬಾಪೂಜಿ ಆಸ್ಪತ್ರೆಯಲ್ಲಿ ಅನುಭವಿ ಮೂತ್ರಪಿಂಡ ಶಾಸ್ತ್ರಜ್ಞರಿಂದ ಉಚಿತ ಚಿಕಿತ್ಸೆ ಹಾಗೂ ಸಮಾಲೋಚನೆ ಪಡೆಯಿರಿ.

**ವೈದ್ಯರು ಸೂಚಿಸಿದ ಪರೀಕ್ಷೆಗಳ ಮೇಲೆ 50% ರಿಯಾಯಿತಿ ಪಡೆಯಿರಿ**

ದಿನಾಂಕ: 15 ಮಾರ್ಚ್ ಬೆಳಿಗ್ಗೆ 11 ರಿಂದ–ಮಧ್ಯಾಹ್ನ 2ರವರೆಗೆ

ಸ್ಥಳ: ಬಾಪೂಜಿ ಆಸ್ಪತ್ರೆ, ಹೊರ ರೋಗಿಗಳ ವಿಭಾಗ, ದಾವಣಗೆರೆ

## ದಿ ತುಂಗಭದ್ರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,
ರಜತ ಮಹೋತ್ಸವ ಕಟ್ಟಡ, ಶಿವಮೊಗ್ಗ ರಸ್ತೆ,
ಹರಿಹರ-577 601. ದೂರವಾಣಿ : 08192 243108

### ಸ್ಥಿರ ಸ್ವತ್ತಿನ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಯಾವತ್ತೂ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸೊಸೈಟಿಯಲ್ಲಿ ಸಾಲವನ್ನು ಪಡೆದು, ಮರುಪಾವತಿ ಮಾಡದೇ ಸುಸ್ತಿಯಾಗಿರುವ ಈ ಕೆಳಕಂಡ ಸುಸ್ತಿದಾರರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿಯಲ್ಲಿ ಡಿಕ್ರಿ ಅವಾರ್ಡಿನ ಆದೇಶದ ಪ್ರಕಾರ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ನ್ಯಾಯಾಲಯದಲ್ಲಿ ಅಮಲ್ಜಾರಿ ಹುಕುಂ ಪಡೆದು ಷೆಡ್ಯೂಲ್ ಸ್ವತ್ತನ್ನು ಬಹಿರಂಗ ಹರಾಜು ಮಾಡಲಾಗುತ್ತಿದೆ. ಇಚ್ಚೆಯುಳ್ಳವರು ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸ್ವತ್ತನ್ನು ಪಡೆಯಬಹುದು.

| ಕ್ರ. ಸಂ. | ತೀರ್ಪುದಾರ ಸಾಲಗಾರರ ಹೆಸರು ಮತ್ತು ವಿಳಾಸ | ಬಾಕಿಯಾಗಿರುವ ಸಾಲದ ಅಸಲು ಬಡ್ಡಿ &ಇತರೆ ಖರ್ಚು | ಹರಾಜಿಗೆ ಒಳಪಡಿಸಿರುವ ಸ್ವತ್ತಿನ ವಿವರ | ಹರಾಜು ದಿನಾಂಕ ಮತ್ತು ಸ್ಥಳ |
|---|---|---|---|---|
| 1 | ಶ್ರೀ. ವಿಶ್ವನಾಥ್ ಸಾ ಭೂತೆ. ಬಿನ್ ವಿಠಲ ಸಾ ಭೂತೆ ದೇವಸ್ಥಾನ ರಸ್ತೆ, ತೆಗ್ಗಿನಕೇರಿ, ಹರಿಹರ ಇಪಿ: 11/2019-20 | ಅಸಲು ರೂ. 7,10,365+ ಈ ತಹಲ್‌ವರೆಗೆ ಬಡ್ಡಿ + ಇತರೆ ಖರ್ಚು ಇದ್ದಲ್ಲಿ | ಹರಿಹರ ನಗರದ ಜೆ ವಿಭಾಗ, ರೈಲ್ವೆ ಲೈನ್ ಹಿಂಭಾಗ, ಕೇಶವ ನಗರ, ಹಳೆ ಅ. ನಂ. 3460/3459/3645 ಚಾ ಅ. ನಂ. 3645/3459/3645ರ ಅಳತೆ 42*(85+99)/2=3864 ಚ.ಅಡಿಗಳು | ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ಮುಂಭಾಗದಲ್ಲಿ ದಿನಾಂಕ: 25-03-2022ನೇ ಶುಕ್ರವಾರ ಬೆಳಗ್ಗೆ 12.00 ಘಂಟೆಗೆ |

**ಸೂಚನೆ :** 1) ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.25,000-00 ಗಳನ್ನು ಸಂಘದಲ್ಲಿ ಡಿಪಾಜಿಟ್ ಮಾಡತಕ್ಕದ್ದು. ಸೊಸೈಟಿಯವರು ಭಾಗವಹಿಸಿದಲ್ಲಿ ಸದರಿ ಡಿಪಾಸಿಟ್ ಪಾವತಿ ಮಾಡಬೇಕಾಗಿಲ್ಲ

2) ಅಧಿಕೃತ ಬಿಡ್‌ದಾರರು ಮಾರಾಟಾಧಿಕಾರಿಗಳು ಹರಾಜನ್ನು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡಾ 15ರಷ್ಟು ಹಣವನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್‌ಗೆ ಹಾಗೂ ನೋಂದಣಿಗೆ ತಗಲುವ ವೆಚ್ಚವನ್ನು ಹರಾಜು ಆದ 45 ದಿವಸಗಳೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಡಿಪಾಜಿಟ್ ಮೊತ್ತವನ್ನು ಸೊಸೈಟಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3) ಮಾರಾಟಾಧಿಕಾರಿಗಳು ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೇ ಮುಂದೂಡುವ ಇಲ್ಲವೇ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

4) ಈ ಸ್ಥಿರಾಸ್ತಿಯು ಹೇಗಿದೆಯೂ ಹಾಗೆ ಹರಾಜು ಮಾಡಲಾಗುವುದು.


5) ಹರಾಜಿನಲ್ಲಿ ಭಾಗವಹಿಸುವವರು ತಮ್ಮ ಗುರುತಿನ ಚೀಟಿ ಹಾಗೂ ವಿಳಾಸ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು.

6) ಹೆಚ್ಚಿನ ಮಾಹಿತಿಗಾಗಿ ಮಾರಾಟಾಧಿಕಾರಿಗಳನ್ನು ಅಥವಾ ಸಂಘದ ಕಾರ್ಯದರ್ಶಿಯವರನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಆದೇಶದ ಮೇರೆಗೆ

ಸಹಿ/- ಅಧ್ಯಕ್ಷರು | ಸಹಿ/- ಕಾರ್ಯದರ್ಶಿ | ಸಹಿ/- ಮಾರಾಟಾಧಿಕಾರಿಗಳು







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte